ಸಂಪಾದಕರು
ಆನಂದಯ್ಯ ವಿರಕ್ತಮಠ
ಎಂ.ಎ ಪತ್ರಿಕೋದ್ಯಮ
ಎಂ.ಎ ಇಂಗ್ಲೀಷ್ , ಬಿ.ಇಡಿ

Title code: KNKAN/26/A0482

# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES  janashreetimes2026@gmail.com  KANNADA DAILY MORNING

ಸಂಪುಟ : 01  ಸಂಚಿಕೆ : 07  ದಿನಾಂಕ: 11-06-2026 ಗುರುವಾರ  ಪುಟ : 04  ದರ : 4 ರೂ.  VOLUME 01  ISSUE: 07  THURSDAY 11-06-2026  PAGE: 04  PRICE : 4/-

## ಕಸ ನಿರ್ವಹಣೆ ಟೆಂಡರ್‌ನಲ್ಲಿ ಹಿಂದೆಂದೂ ಕಾಣದ ಬಹುಕೋಟಿ ಬೃಹತ್ ಹಗರಣ : ಬಿಜೆಪಿ ಸ್ಫೋಟಕ ಆರೋಪ



ಬೆಂಗಳೂರು: ರಾಜಧಾನಿ ಬೆಂಗಳೂರಿನ ಕಸ ನಿರ್ವಹಣೆ ಮಾಡುವ ಟೆಂಡರ್‌ನಲ್ಲಿ ಹಿಂದೆಂದೂ ಕಾಣದ ಸುಮಾರು 36 ಸಾವಿರ ಕೋಟಿ ಬೃಹತ್ ಹಗರಣ ನಡೆದಿದೆ ಎಂದು ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ಸ್ಫೋಟಕ ಆರೋಪ ಮಾಡಿದೆ.

ವಿಧಾನಸೌಧದಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದ ಪ್ರತಿಪಕ್ಷದ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ರವಿಸುಬ್ರಹ್ಮಣ್ಯ, ಸಿ.ಕೆ. ರಾಮಮೂರ್ತಿ, ಮಾಜಿ ಸಂಸದ ಮುನಿಸ್ವಾಮಿ ಅವರುಗಳು, ಕಸದಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳನ್ನು ಬಿಡುಗಡೆ ಮಾಡಿದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ , ಹಾಲಿ ಸಿಎಂ ಡಿ.ಕೆ.ಶಿವಕುಮಾರ್ ಅವರ ಅವಧಿಯಲ್ಲೇ ಈ ಟೆಂಡರ್ ಹಗರಣ ನಡೆದಿರುವುದರಿಂದ ಸರ್ಕಾರ ಇದನ್ನು ಸಿಬಿಐ ತನಿಖೆಗೆ ವಹಿಸಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದರು.

ಆರ್.ಅಶೋಕ್ ಮಾತನಾಡಿ, ಇಡೀ ಬೆಂಗಳೂರು ಜನ ಬೆಚ್ಚಿ ಬೀಳುವ ಹಗರಣ ಇದಾಗಿದೆ. ಸರ್ಕರ ಕಸದ ಹೆಸರಿನಲ್ಲಿ 36 ಸಾವಿರ ಕೋಟಿ ರೂ. ಲೂಟಿ ಮಾಡಿದೆ. ದೆಹಲಿ ಮೂಲದ ಕಂಪನಿಗೆ ಟೆಂಡರ್ ನೀಡಲಾಗಿದ್ದು, ಇದರಲ್ಲಿ ಕಾಂಗ್ರೆಸ್ ಹೈಕಮಾಂಡ್ ಕೂಡ ಭಾಗಿಯಾಗಿದೆ. ಇದುವರೆಗೂ ಇಂಥ ಹಗರಣ ನಡೆದಿಲ್ಲ ಎಂದು ಆರೋಪಿಸಿದರು. 2020ರಲ್ಲಿ ಕೇಂದ್ರ ಸರ್ಕಾರ ಕಸದ ವಿಲೇವಾರಿ ಅಭಿಯಾನದಲ್ಲಿ ಆಗಿನ ಬಿಜೆಪಿ ಸರ್ಕಾರಕ್ಕೆ ಪ್ರಶಂಸೆ ಮಾಡಿತ್ತು. 1344 ಒಟ್ಟು ಕಸದ ನಿರ್ವಹಣೆಗೆ ಈಗ ವೆಚ್ಚ ಆಗುತ್ತಿದೆ. ಇದರಲ್ಲಿ 514 ಕೋಟಿ ಸಂಗ್ರಹಣ, ಸಾಗಾಣಿಕೆಗೆ ವೆಚ್ಚವಾದರೆ, 444 ಕೋಟಿ ಪೌರ ಕಾರ್ಮಿಕರಿಗೆ ಕೊಡಲಾಗುತ್ತಿದೆ ಎಂದು ವಿವರಿಸಿದರು.

ಈಗ ಕಾಂಗ್ರೆಸ್ ಸರ್ಕಾರ ಹೊಸ ಪ್ರಸ್ತಾವನೆ ಮಾಡಿದೆ. ಅದೇ ಸಿನಿಮಾ ಹೊಸ ಪೋಸ್ಟರ್ ರೀತಿ ಕಸದ ದೊಡ್ಡ ಹಗರಣವನ್ನು ಜನಪ್ರತಿನಿಧಿಗಳು ಇಲ್ಲದ ಸಂದರ್ಭದಲ್ಲಿ ನಡೆಸಿದ್ದಾರೆ. ಬಲಾಢ್ಯ ಕಂಪೆನಿಗೆ ಕಸದ ಟೆಂಡರ್ ಕೊಡಲಾಗಿದೆ. 36 ಸಾವಿರ ಕಸದ ಟೆಂಡರ್ ನಲ್ಲಿ 10 ಸಾವಿರ ಕೋಟಿ ಕಿಕ್‌ಬ್ಯಾಕ್ ಪಡೆಯಲಾಗಿದೆ ಎಂದು ಆರೋಪಿಸಿದರು. ಕಸದ ಟೆಂಡರ್ ಸಾಮಾನ್ಯವಾಗಿ 1 ಅಥವಾ 2 ವರ್ಷಕ್ಕೆ ಕೊಡುತ್ತಾರೆ. ಆದರೆ ಕಾಂಗ್ರೆಸ್ ಸರ್ಕಾರ 30 ವರ್ಷಕ್ಕೆ ಕಸದ ಟೆಂಡರ್ ಕೊಟ್ಟಿದೆ. ಇದರ ಜತೆಗೆ ಇನ್ನೂ 35 ವರ್ಷ ಟೆಂಡರ್ ಅವಧಿ ವಿಸ್ತರಿಸಲು ಅವಕಾಶ ಕೊಡಲಾಗಿದೆ. ಅಲ್ಲಿಗೆ ಒಟ್ಟು 65 ವರ್ಷಕ್ಕೆ ಬೆಂಗಳೂರಿನ ಕಸದ ಟೆಂಡರ್ ಕೊಡಲಾಗಿದೆ. 65 ವರ್ಷ ಯಾರು ಇರುರೆ? ಯಾರು ಬದುಕಿರುತ್ತಾರೆ? ಎಂದು ಪ್ರಶ್ನಿಸಿದರು. ದೆಹಲಿಯ ರಾಮ್‌ಕಿ ಕಂಪೆನಿಗೆ ಕಸದ ಟೆಂಡರ್ ಕೊಡಲಾಗಿದೆ. ರಾಮ್‌ಕಿ ಕಂಪೆನಿಗೆ ಎರಡು ಪ್ಯಾಕೇಜ್‌ನಲ್ಲಿ ಟೆಂಡರ್ ಕೊಡಲಾಗಿದೆ. ಇದು ಕಪ್ಪುಪಟ್ಟಿಗೆ ಸೇರಿರುವ ಕಂಪೆನಿ. ಕಪ್ಪು ಪಟ್ಟಿಗೆ ಸೇರಿದ ಬೆಂಗಳೂರು ಉತ್ತರ ಮತ್ತು ದಕ್ಷಿಣ ಪಾಲಿಕೆಗಳ ಕಸದ ಟೆಂಡರ್ ಈ ಕಂಪನಿಗೆ ಕೊಡಲಾಗಿದೆ ಎಂದು ದೂರಿದರು. ಸರ್ಕಾರ ಕಸ ಸಂಸ್ಕರಣೆಗೆ ಬೆಂಗಳೂರು ಸುತ್ತ ತಲಾ 100 ಎಕರೆ ಜಮೀನು ಖರೀದಿ ಮಾಡಿ ಕೊಡುತ್ತಿದೆ. ನೈಸ್ ಸಂಸ್ಥೆ ಜತೆ ಸರ್ಕಾರ ಏನು ಒಪ್ಪಂದ ಮಾಡಿಕೊಂಡಿತ್ತೋ ಅದೇ ರೀತಿಯ ಸ್ಕೀಮ್ ಇಲ್ಲೂ ಇದೆ. ಈ ಸಂಸ್ಥೆಗೆ 1500 ಕೋಟಿ ಸಾಲ ಸರ್ಕಾರ ಕೊಡುತ್ತಿದೆ. ಕೈಬೀಸಿಕೊಂಡು ಬಂದು ಈ ಸಂಸ್ಥೆ ಹಣ ಮಾಡಿಕೊಳ್ಳಲು ಮುಂದಾಗಿದೆ. ನೈಸ್ ನಲ್ಲೂ ಅದೇ ರೀತಿ ಆಗಿದ್ದು ಎಂದರು.

ಒಂದು ಟನ್ ಕಸಕ್ಕೆ ಸಂಸ್ಕರಣಾ ವೆಚ್ಚ 260 ರೂ. ಆದರೆ ರಾಮ್‌ಕಿ ಸಂಸ್ಥೆಗೆ ಸರ್ಕಾರ ಒಂದು ಟನ್‌ಗೆ 2400 ರೂ. ಕೊಡುತ್ತಿದೆ. ಇದು ವರ್ಷಕ್ಕೆ 39437 ಕೋಟಿಯಾಗಲಿದೆ. ಕಸದ ಟೆಂಡರ್‌ನಲ್ಲಿ ಎಲ್ಲ ಗೋಲ್‌ಮಾಲ್ ನಡೆಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೆಟಿಟಿಪಿ ಆ?ಯಕ್ಟ್‌ನ ನಿಯಮಗಳ ಪ್ರಕಾರ ಕಸದ ಟೆಂಡರ್ ಕರೆದಿಲ್ಲ. ಕಸದ ಟೆಂಡರ್ ಲೋಪಗಳ ಬಗ್ಗೆ ಆರ್ಥಿಕ ಇಲಾಖೆಯೇ ಆಕ್ಷೇಪಿಸಿದೆ. ಒಂದೇ ಕಂಪೆನಿಗೆ ಎರಡು ಪ್ಯಾಕೇಜ್ ಯಾಕೆ ಕೊಟ್ಟಿದ್ದೀ? ಶೇ.5ರಷ್ಟು ಕಸದ ವೆಚ್ಚ ಯಾಕೆ ಎಂದು ಆರ್ಥಿಕ ಇಲಾಖೆ ಸರ್ಕಾರಕ್ಕೆ ಕೇಳಿದೆ. ಇದು ಅಪಾಯಕಾರಿ ಟೆಂಡರ್ ಅಂತನೂ ಆರ್ಥಿಕ ಇಲಾಖೆ ತಿಳಿಸಿದೆ ಎಂದು ಉಲ್ಲೇಖಿಸಿದರು. ಈ ಸರ್ಕಾರದಲ್ಲಿ ಎಲ್ಲವೂ ಗೋಲಾಲ್ ನಡೆದಿದೆ. ರೈಟ್?ಸ ಕಂಪನಿ ತೆಗೆದು, ರಾಮ್ಕಿ ಸಂಸ್ಥೆಗೆ ನೀಡಿರುವುದರಿಂದ ಉತ್ತರ ಮತ್ತು ದಕ್ಷಿಣ ಪ್ಯಾಕೇಜ್‌ಗೆ ಶೇ.19.43ರಷ್ಟು ಹೆಚ್ಚುವರಿ ಹಣ ಕೊಟ್ಟಿದ್ದಾರೆ. ಟೆಂಡರ್ ಕರೆದು, ಟೆಂಡರ್‌ಗೆ ಅರ್ಜಿ ಹಾಕಿದವರ ವಜಾ ಮಾಡುತ್ತಾರೆ ಎಂದು ಆರೋಪಿಸಿದರು.

## ಟಿ.ಎ ನಾರಾಯಗೌಡರ ಜನ್ಮದಿನಾಚರಣೆ ರೋಗಿಗಳಿಗೆ ಹಣ್ಣು ಹಂಪಲ ವಿತರಣೆ



ನರಗುಂದ : ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ್ರ ಜನ್ಮ ದಿನಾಚರಣೆ ಅಂಗವಾಗಿ ನರಗುಂದದ ಬಾಬಾಸಾಹೇಬ ಭಾವೆ ಸರ್ಕಾರಿ ತಾಲೂಕು ಆಸ್ಪತ್ರೆ ರೋಗಿಗಳಿಗೆ ಕರವೇ ಕಾರ್ಯಕರ್ತರು ಉಚಿತ ಹಾಲು, ಹಣ್ಣು-ಹಂಪಲಗಳನ್ನು ಬುಧವಾರ ವಿತರಿಸಿದರು. ಡಾ.ರೂಪಾ, ಡಾ. ಹಂಜಿ, ಕರವೇ ತಾಲೂಕಾಧ್ಯಕ್ಷ ನಭಿಸಾಬ ಕಿಲ್ಲೇದಾರ, ಈಶ್ವರಯ್ಯ ಹಿರೇಮಠ, ಮಲ್ಲಿಕಾರ್ಜುನ ಹಿರೇಮಠ, ಅಶೋಕ ಮಹಾಕಾಳೆ, ರಾಮಣ್ಣ ಮೆಣಸಗಿ, ಬಸವರಾಜ ಎಚ್, ಮಲ್ಲಪ್ಪ ಯಾದವಾಡ, ಖಲಂದರ ನರಗುಂದ, ರಾಜು ಕಟ್ಟಿಮನಿ, ಚನ್ನಬಸಪ್ಪ ಹೊಸರಣ್ಣವರ, ಮೈನುದ್ದೀನ ಮುಲ್ಲಾ, ರಫೀಕ ತಹಸೀಲ್ದಾರ, ಆಕಾಶ ಭೋವಿ, ವಿಜಯ ಬಡಿಗೇರ ಉಪಸ್ಥಿತರಿದ್ದರು.

## ಎಚ್.ಕೆ. ಪಾಟೀಲರಿಗೆ ಸಚಿವ ಸ್ಥಾನ ನೀಡದಿದ್ದರೆ ಉಪವಾಸ ಸತ್ಯಾಗ್ರಹ




ಗದಗ: ಗದಗ ಶಾಸಕ ಎಚ್ ಕೆ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡದೇ ಇರೋದಕ್ಕೆ ನೋವಾಗಿದ್ದು ಮುಂದಿನ ದಿನಗಳಲ್ಲಿ ಸಚಿವ ಸ್ಥಾನ ನೀಡದೇ ಹೋದರೆ ಅಲ್ಪ ಸಂಖ್ಯಾತರ ವತಿಯಿಂದ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಬಿಸ್ಮಿಲ್ಲಾ ಮಸ್ಜೀದ್ ನ ಅಬುಬಕರ್ ಅಣ್ಣಿಗೇರಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಎಚ್.ಕೆ. ಪಾಟೀಲ ಅವರು ಗದಗ ಜಿಲ್ಲೆಯ ಮತ್ತು ಉತ್ತರ ಕರ್ನಾಟಕ ದಿಮಂತ ನಾಯಕ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ಗದಗ ನಗರದ ಬಿಸ್ಮಿಲ್ಲಾ ಮಸ್ಜೀದ ಜಮಾತ ವತಿಯಿಂದ ಆಗ್ರಹವಿದ್ದು ಎರಡನೇ ಪಟ್ಟಿಯಲ್ಲಿ ಸಚಿವ ಸ್ಥಾನ ನೀಡದಿದ್ದಲ್ಲಿ ಇಡಿ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ.ಕಾರಣ ಪ್ರಾಮಾಣಿಕ ಪಾರದರ್ಶಕ ಆಡಳಿತಕ್ಕೆ ಕೈಗನ್ನಡಿಯಾದ ಎಚ್. ಕೆ. ಪಾಟೀಲ ಅವರ ಅನುಭವ ಮತ್ತು ಸಾಮಾಜಿಕ ಚಿಂತನೆ ಅಪಾರವಾದದ್ದು ನಮ್ಮ ಜಮಾತಿನ ಸಮಾಜ ಬಾಂಧವರು ಈ ಮೂಲಕ ಕಾಂಗ್ರೆಸ್ ಹಿರಿಯ ಮುಖಂಡರಲ್ಲಿ ವಿನಂತಿಸಿ ನಮ್ಮ ನಾಯಕರಿಗೆ ಸಚಿವ ಸ್ಥಾನ ನೀಡದಿದ್ದಲ್ಲಿ ಉಪವಾಸ ಸತ್ಯಾಗ್ರಹ ಮಾಡಲಾಗುವುದು ಎಂದರು. ಪತ್ರಿಕಾ ಗೋಷ್ಠಿಯಲ್ಲಿ ಬಿಸ್ಮಿಲ್ಲಾ ಮಸ್ಜೀದ ಮುಖಂಡರುಗಳಾದ ಮಹ್ಮದ ರಫಿಕ ಅಬ್ಬಿಗೇರಿ, ರಾಜಾಖಾನ ಪಠಾಣ,ಅಬುಬಕರ್ ಅಣ್ಣಿಗೇರಿ, ಮುನ್ನಾ ಶೇಖ, ಬಾಷಾಸಾಬ ಮಲ್ಲಸಮುದ್ರ, ಮುನ್ನಾ ಬಳ್ಳಾರಿ, ಶರೀಫ್ ನದಾಫ, ಪೈರೂಜ ಜಮಾದಾರ, ದಾವುದ ಮುರಡಿ, ರಶೀದಸಾಬ ಡಾಲಾಯತ, ಆಸಿಫ್ ಪಠಾಣ, ಮುನ್ನಾ ತಹಶೀಲ್ದಾರ, ಸೊಯಬ ಅಲಿ ಹಿಳ್ಯಾಳ ಸೇರಿದಂತೆ ಇತರರಿದ್ದರು.

## ಮೋದಿ ಪ್ರಧಾನಿ ಹುದ್ದೆ ಅಲಂಕರಿಸಿ ಹನ್ನೆರಡು ವರ್ಷ - ಗದನಲ್ಲಿ ಪೂಜೆ ಸಲ್ಲಿಸಿ ಬೊಮ್ಮಾಯಿ ಹರ್ಷ



ಗದಗ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರಧಾನಿ ಹುದ್ದೆ ಅಲಂಕರಿಸಿ ಹನ್ನೆರಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಜಿಲ್ಲಾ ಬಿಜೆಪಿಯಿಂದ ವಿಶೇಷ ಪೂಜೆ ಸಲ್ಲಿಸಲಾಗಿದೆ.

ನಗರದ ಐತಿಹಾಸಿಕ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲಾಯಿತು. ಈ ವೇಳೆ ಹಾವೇರಿ-ಗದಗ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವೀರನಾರಾಯಣ ದೇವಾಲಯದ ಅರ್ಚಕರು ಬೊಮ್ಮಾಯಿ ಹಾಗೂ ಶಾಸಕ ಸಿ.ಸಿ ಪಾಟೀಲರಿಗೆ ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್. ವ್ಹಿ ಸಂಕನೂರ,ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರಡಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ದೇವದಾಸಿ ಪದ್ಧತಿ ನಿರ್ಮೂಲನೆಗೆ ಪ್ರತಿಯೊಬ್ಬರೂ ಕೈ ಜೋಡಿಸಿ : ವಾಸಂತಿ ಉಪ್ಪಾರ ಕರೆ



ಕೊಪ್ಪಳ: ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ಅನಿಷ್ಟ ಪದ್ಧತಿಯಾದ ದೇವದಾಸಿ ಪದ್ಧತಿಯ ನಿರ್ಮೂಲನೆಗೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಪ್ರದಾನ ವ್ಯವಸ್ಥಾಪಕರಾದ ವಾಸಂತಿ ಉಪ್ಪಾರ ಅವರು ಕರೆ ನೀಡಿದ್ದಾರೆ.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಮಾಜಿ ದೇವದಾಸಿ ಮಹಿಳೆಯರೊಂದಿಗೆ ಇತ್ತೀಚೆಗೆ (ಜೂ. 8ರಂದು) ಹಮ್ಮಿಕೊಂಡಿದ್ದ ಸಂವಾದ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇವದಾಸಿ ಬಿಡುವ ಪದ್ಧತಿಯು ಅತ್ಯಂತ ಕೆಟ್ಟ ಸಾಮಾಜಿಕ ಪಿಡುಗು ಆಗಿದ್ದು, ಇದು ಮುಗ್ಧ ಮಹಿಳೆಯರ ಬದುಕನ್ನು ಕತ್ತಲೆಗೆ ನೂಕುತ್ತದೆ. ಈ ಅನಿಷ್ಠ ಪದ್ಧತಿಯನ್ನು ನಿರ್ಮೂಲನೆಗೆ ಸರ್ಕಾರ ಕಾನೂನು ಜಾರಿಗೆ ತಂದಿದ್ದು ಯಾವುದೇ ಮಹಿಳೆಯನ್ನು ದೇವದಾಸಿ ಪದ್ಧತಿಗೆ ಒಳಪಡಿಸಿದಲ್ಲಿ ಅದಕ್ಕೆ ಕಾರಣರಾದವರಿಗೆ, ಅದಕ್ಕೆ ಪ್ರೋತ್ಸಾಹ ನೀಡಿದವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ. ಯಾವುದೇ ರೂಪದಲ್ಲಿ ದೇವದಾಸಿ ಪದ್ಧತಿಯನ್ನು ಆಚರಿಸುವದು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧ ಆಗಿರುತ್ತದೆ. ಹಾಗಾಗಿ ಮಾಜಿ ದೇವದಾಸಿಯರಾದ ನೀವುಗಳು ಯಾರೇ ಈ ಅನಿಷ್ಠ ಪದ್ಧತಿಯನ್ನು ಆಚರಿಸುವದು ಕಂಡು ಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವ ಮೂಲಕ, ಈ ಪದ್ಧತಿಯ ನಿರ್ಮೂಲನೆಗೆ ಕೈ ಜೋಡಿಸಬೇಕೆಂದರು.

ಸರ್ಕಾರವು ಮಾಜಿ ದೇವದಾಸಿಯರ ಸಮೀಕ್ಷೆಯನ್ನು ನಡೆಸಿದ್ದು, ಸರ್ವೆ ವರದಿಯ ಆಧಾರದ ಮೇಲೆ ಮಾಜಿ ದೇವದಾಸಿ ಮಹಿಳೆಯರ ಜೀವನ ಸುಧಾರಣೆಗೆ ಸರ್ಕಾರದ ಮಟ್ಟದಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಮಾಲೋಚನಾ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಅಮರೇಶ್ ಹಾವಿನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಅನ್ನಪೂರ್ಣ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ, ಮಹಿಳಾ ಅಭಿವೃದ್ಧಿ ನಿಗಮದ ನಿರೀಕ್ಷಕಿ ಪೂರ್ಣಿಮಾ ಹಾಗೂ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

ಗದಗ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಗದಗ ಇವರ ವತಿಯಿಂದ 2026-27ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತರಾದ (ಕ್ರಿಶ್ಚಿಯನ್ ಸಮುದಾಯವನ್ನು ಹೊರತುಪಡಿಸಿ) ಮುಸ್ಲಿಂ, ಜೈನ್, ಭೌದ್ಧರು, ಸಿಖ್ ಫಾರ್ಸಿ, ಜನಾಂಗದವರಿಗೆ.ಅರಿವು ವಿದ್ಯಾಭ್ಯಾಸ ಸಾಲ (ಪ್ರೇಶ್) ಯೋಜನೆಯಡಿಯಲ್ಲಿ ನಿಗಮದಿಂದ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯಲ್ಲಿಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ KEA via CET/NEET ನಲ್ಲಿ ಆಯ್ಕೆಯಾಗುವ ಒಜಜುcal ( MBBS) , BDS, BE, B.Tech, Bachalor of Archetecture, B.Ayush, Pharmacy, Agriculture Science and Veternary ಇಂತಹ ಕೋರ್ಸಗಳಿಗೆ ಆಯ್ಕೆಯಾದ ಅಲ್ಪಸಂಖ್ಯಾತ ವಿದ್ಯಾರ್ಥಿಗಳು "ಅರಿವು" ವಿದ್ಯಾಭ್ಯಾಸ ಸಾಲ (ಪ್ರೇಶ್) ಯೋಜನೆಯಡಿ ಶೈಕ್ಷಣಿಕ ಸಾಲವನ್ನು ಪಡೆಯಲು ಅಪೇಕ್ಷಿಸುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ದಿನಾಂಕ:08-05-2026ರಿಂದಆನಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗಮದ ವೆಬಸೈಟ್:https:kmdconline.karnataka. ರಠತಿ.ಏಟ ಮೂಲಕ ಅರ್ಜಿ ಸಲ್ಲಿಸಬಹುದು. ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30-05-2026 ಅಂತ್ಯದವರೆಗೆ ನಿಗಧಿ ಪಡಿಸಲಾಗಿತ್ತು. ಆದರೆ ಕೇಂದ್ರ ಕಛೇರಿಯ ನಿರ್ದೇಶನದ ಅನ್ವಯ ಅಂತಿಮ ದಿನಾಂಕವನ್ನು 15-06-2026 ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಜಿಲ್ಲಾ ವ್ಯವಸ್ಥಾಪಕರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತ ಮೌಲಾನಾ ಆಜಾದ ಅಲ್ಪಸಂಖ್ಯಾತರ ಭವನ 1ನೇ ಮಹಡಿ ಜಿಲ್ಲಾ ನ್ಯಾಯಲಯದ ಎದುರುಗಡೆ, ಹುಬ್ಬಳ್ಳಿ ರಸ್ತೆ, ಗದಗ ಜಿಲ್ಲೆ ಈ ಕಛೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08372-295147 ಸಂಪರ್ಕಿಸಬಹುದಾಗಿದೆ.

## ಪರಿಸರದ ಸಮತೋಲನಕ್ಕಾಗಿ ಪ್ರತಿಯೊಬ್ಬರೂ ಒಂದು ಗಿಡ ನಡಿ : ಚಂದ್ರಶೇಖರ ಬಿ ಕಂದಕೂರ



ಹೊಳೆ ಆಲೂರ :- ಪರಿಸರದ ಸಮತೋಲನ ಕಾಪಾಡಲು ಪ್ರತಿಯೊಬ್ಬ ನಾಗರಿಕನು ತಮ್ಮ ಮನೆಯ ಸುತ್ತಮುತ್ತ ಕನಿಷ್ಠ ಒಂದು ಸಸಿಯನ್ನಾದರೂ ನೆಟ್ಟು ಅದರ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ರೋಣ ತಾಲೂಕ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಚಂದ್ರಶೇಖರ ಬಿ ಕಂದಕೂರ ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರೋಣ ತಾಲೂಕಿನ ಕೌಶ್ಯಲ್ಯಾ ಉಧ್ಯಶೀಲತೆ ಜೀವನೋಪಾಯ ಸಂಜೀವಿನಿ ಮಹಿಳಾ ಸಂಘ, ಹೊಳೆ ಆಲೂರ ಗ್ರಾಮ ಪಂಚಾಯತಿ ಹಾಗೂ ಕಲ್ಮೇಶ್ವರ ಪ್ರೌಢ ಶಾಲೆ ಇವರ ಸಂಯುಕ್ತ ಆಶ್ರಯದಲ್ಲಿ ಪರಿಸರ ಜಾಗೃತಿ ಹಾಗೂ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ರೋಣ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಚಂದ್ರಶೇಖರ ಬಿ. ಕಂದಕೂರ ಅವರು ಸಸಿ ನೆಡುವ ಮೂಲಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಇಂದಿನ ಅತ್ಯಂತ ಪ್ರಮುಖ ಅಗತ್ಯವಾಗಿದ್ದು, ಪ್ರಕೃತಿಯೊಂದಿಗೆ ಮಾನವನ ಬದುಕು ಅವಿನಾಭಾವ ಸಂಬಂಧ ಹೊಂದಿದೆ ಎಂದು ಹೇಳಿದರು. ಪರಿಸರದ ಸಮತೋಲನ ಕಾಪಾಡಲು ಪ್ರತಿಯೊಬ್ಬ ನಾಗರಿಕನು ತಮ್ಮ ಮನೆಯ ಸುತ್ತಮುತ್ತ ಕನಿಷ್ಠ ಒಂದು ಸಸಿಯನ್ನಾದರೂ ನೆಟ್ಟು ಅದರ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯ, ತಾಪಮಾನ ಏರಿಕೆ, ಅರಣ್ಯ ನಾಶ, ಜಲಮೂಲಗಳ ಕ್ಷೀಣತೆ ಹಾಗೂ ಪರಿಸರ ಮಾಲಿನ್ಯ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದನ್ನು ತಡೆಗಟ್ಟಲು ಪರಿಸರ ಸ್ನೇಹಿ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಬೇಕು. ವಿಶೇಷವಾಗಿ ಶಾಲಾ ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಮುಂದಿನ ಪೀಳಿಗೆಯನ್ನು ಪರಿಸರ ಸಂರಕ್ಷಣೆಯತ್ತ ಕೊಂಡೊಯ್ಯುವುದು ಅಗತ್ಯವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯಗಳು, ಸ್ವಚ್ಛತೆ, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಹಸಿರು ಗ್ರಾಮ ನಿರ್ಮಾಣ, ಜಲ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಯೋಜನೆಗಳ ಕುರಿತು ಚರ್ಚೆ ನಡೆಸಲಾಯಿತು. ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ಸಾರ್ವಜನಿಕರು ಪರಿಸರ ಕಾಳಜಿಯೊಂದಿಗೆ ಕಾರ್ಯನಿರ್ವಹಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಚಿಸಿದರು. ಕಾರ್ಯಕ್ರಮದಲ್ಲಿ, ಓಖಐಒ ಸಿಬ್ಬಂದಿಗಳು, ಪಿಡಿಒ, ಗ್ರಾಮ ಪಂಚಾಯತಿ ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಕಲ್ಲೇಶ್ವರ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

## ಉತ್ತರ ಕರ್ನಾಟಕದಲ್ಲಿ ವರುಣಾರ್ಭಟ ಜನ ಜೀವನ ಅಸ್ಥವ್ಯಸ್ಥ



ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆಯ ಆರ್ಭಟ ಜೋರಾಗಿದ್ದು, ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಸುರಿದ ಭಾರಿ ಮಳೆಗೆ ಜನ ಜೀವನ ಅಸ್ಥವ್ಯಸ್ಥಗೊಂಡಿದೆ.
ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ನಿನ್ನೆ ಸುರಿದ ಮಳೆಗೆ ಅಕ್ಷರಸಹ ಜನರು ತತ್ತರಿಸಿ ಹೋಗಿದ್ದಾರೆ. ರಸ್ತೆಯೆಲ್ಲ ಕೆರೆಯಂತಾಗಿದ್ದು, ವಾಹನ ಸವಾರರು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಬೈಲಹೊಂಗಲ ನಗರದ ಕಲಟಗಲ್ಲಿ, ಭಗವಾನ್ ಚಾಳ, ಹುಡೇದ ಭಾವಿ ಸೇರಿದಂತೆ ಮತ್ತಿರ ಪ್ರದೇಶಗಳಲ್ಲಿ ಮಳೆಗೆ ಮನೆಗಳು ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಸವದತ್ತಿ ನಗರದಲ್ಲಿ ಮಳೆ ನೀರಿಗೆ ಆಟೋ ಹಾಗೂ ದ್ವಿಚಕ್ರ ವಾಹನ ಕೊಚ್ಚಿ ಹೋಗಿದೆ. ವಿಜಯಪುರ ನಗರದ ಹಲವೆಡೆ ಮಳೆಯಾಗಿದ್ದು, ಚರಂಡಿಯಲ್ಲಿ ಭಾರಿ ಪ್ರಮಾಣದ ಮಳೆ ನೀರು ಹರಿಯುತ್ತಿದ್ದು, ವಾಹನ ಸವಾರರು ತೀವ್ರ ತೊಂದರೆ ಅನುಭವಿಸುವಂತಾಗಿತ್ತು.

## ಖ್ಯಾತ ನಿರ್ದೇಶಕ ಭಾರತಿರಾಜ ಇನ್ನಿಲ್ಲ



ಚೆನ್ನೈ: ಹಿರಿಯ ತಮಿಳು ಸಿನಿಮಾ ನಿರ್ದೇಶಕ, ನಿರ್ಮಾಪಕ ಮತ್ತು ಚಿತ್ರಕಥೆಗಾರ ಭಾರತಿರಾಜ ಇಂದು ವಯೋಸಹಜ ತೊಂದರೆಗಳಿಂದ ನಿಧನರಾಗಿದ್ದಾರೆ.
ಕಥೆಗಳ ಆಯ್ಕೆ ಮತ್ತು ಅವುಗಳ ಚಿಕಿತ್ಸೆಗೆ ಟ್ರೆಂಡ್‌ಸೆಟರ್ ಎಂದು ಕರೆಯಲ್ಪಡುವ ನಟ-ನಿರ್ದೇಶಕ ಚೆನ್ನೈನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು.

ಗ್ರಾಮೀಣ ವಿಷಯಕ್ಕೆ ಹೆಸರುವಾಸಿಯಾದ ಬಹು ರಾಷ್ಟ್ರೀಯ ಪ್ರಶಸ್ತಿ ವಿಜೇತ ಭಾರತಿರಾಜ 1977 ರಲ್ಲಿ ತಮ್ಮ ಮೊದಲ ನಿರ್ದೇಶನದ 16 ವಯಸ್ಸಿನಿಲೆ ಮೂಲಕ ಖ್ಯಾತಿಯನ್ನು ಗಳಿಸಿದರು. ಪ್ರಮುಖ ನಟರಾದ ಕಮಲಹಾಸನ್ ಮತ್ತು ಶ್ರೀದೇವಿ ಪ್ರಮುಖ ಜೋಡಿಯಾಗಿದ್ದರು, ಸೂಪರ್‌ಸ್ಟಾರ್ ರಜನಿಕಾಂತ್ ಅವರು ಬಾಕ್ಸ್ ಆಫೀಸ್‌ನಲ್ಲಿ ಆಳ್ವಿಕೆ ನಡೆಸಿದ ಚಿತ್ರದಲ್ಲಿ ಖಳನಾಯಕನ ಪಾತ್ರವನ್ನು ನಿರ್ವಹಿಸಿದರು. ಈ ಚಿತ್ರವು ಇಂದಿಗೂ ಅತ್ಯುತ್ತಮ ತಮಿಳು ಚಿತ್ರಗಳಲ್ಲಿ ಒಂದಾಗಿದೆ. ಅವರನ್ನು ಪ್ರೀತಿಯಿಂದ ಇಯಕ್ಕುನರ್ ಇಮಾಯಂ ಎಂದು ಕರೆಯಲಾಗುತ್ತಿತ್ತು, ಇದು ಸರಿಸುಮಾರು ನಿರ್ದೇಶಕರ ಶಿಖರ ಎಂದು ಅನುವಾದಿಸುತ್ತದೆ. ಆರ್‌ಆರ್ ನಿಂದ ಪ್ರಾರಂಭವಾಗುವ ಮಹಿಳಾ ನಾಯಕಿಯರನ್ನು ತಮ್ಮ ಚಿತ್ರಗಳಲ್ಲಿ ಪರಿಚಯಿಸುವ ವಿಶಿಷ್ಟ ವೈಶಿಷ್ಟ್ಯವನ್ನು ಭಾರತಿರಾಜ ಹೊಂದಿದ್ದರು, ಉದಾಹರಣೆಗೆ ರಾಧಾ.ದಿವಂಗತ ನಿರ್ದೇಶಕರು ಪದ್ಮಶ್ರೀ ಪುರಸ್ಕೃತರು.ಕಳೆದ ಹಲವು ವರ್ಷಗಳಿಂದ ನಿರ್ದೇಶನದಿಂದ ದೂರವಿದ್ದರೂ, ಭಾರತಿರಾಜ ನಟನೆಗೆ ಇಳಿದರು, ಧನುಷ್ ಸೇರಿದಂತೆ ಪ್ರಮುಖ ನಟರೊಂದಿಗೆ ಅವರ ಮೆಗಾ ಹಿಟ್ ತಿರುಚಿತ್ರಂಬಲಂ ಚಿತ್ರದಲ್ಲಿ ನಟಿಸಿದರು.ಅವರ ಮಗ, ನಟ ಮನೋಜ್ ಅವರಿಗಿಂತ ಮೊದಲೇ ನಿಧನರಾಗಿದ್ದರು.

## ಪಾಕ್ ವಾಯುದಾಳಿಗೆ ಅಫ್ಘಾನಿಸ್ತಾನದಲ್ಲಿ 13 ಮಂದಿ ಬಲಿ



ಕಾಬೂಲ್: ಪಾಕಿಸ್ತಾನವು ಇಂದು ನಡೆಸಿದ ಹೊಸ ವಾಯುದಾಳಿಗಳಲ್ಲಿ ಕನಿಷ್ಠ 13 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಫ್ಘಾನಿಸ್ತಾನ ತಿಳಿಸಿದೆ. ಪಾಕ್ ನಡೆಸಿದ ದಾಳಿಯಲ್ಲಿ ಇತರ 14 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ತಾಲಿಬಾನ್ ಮುಖ್ಯ ವಕ್ತಾರ ಜಬಿಹುಲ್ಲಾ ಮುಜಾಹಿದ್ ಅವರು ತಿಳಿಸಿದ್ದಾರೆ.

ಅಫ್ಘಾನಿಸ್ತಾನದ ಖೋಸ್ಟ್, ಕುನಾರ್ ಮತ್ತು ಪಕ್ತಿಕಾ ಪ್ರಾಂತ್ಯಗಳನ್ನು ಗುರಿಯಾಗಿಸಿಕೊಂಡು ವಾಯುದಾಳಿಗಳನ್ನು ನಡೆಸಲಾಗಿದೆ. ಈ ದಾಳಿಗಳಲ್ಲಿ 11 ಮಕ್ಕಳು, ಒಬ್ಬ ಮಹಿಳೆ ಮತ್ತು ಒಬ್ಬ ವೃದ್ಧ ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದರು. ಅಂಗೀಕಾರವಿಲ್ಲ.ಫೆಬ್ರವರಿ ಅಂತ್ಯದಲ್ಲಿ ಅಫ್ಘಾನಿಸ್ತಾನವು ಅಫ್ಘಾನಿಸ್ತಾನದೊಳಗೆ ಪಾಕಿಸ್ತಾನಿ ವೈಮಾನಿಕ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನದ ಮೇಲೆ ಗಡಿಯಾಚೆಗಿನ ದಾಳಿಯನ್ನು ನಡೆಸಿದ ನಂತರ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನವು ತಿಂಗಳುಗಳ ಕಾಲ ಮಾರಕ ಹೋರಾಟದಲ್ಲಿ ಸಿಲುಕಿಕೊಂಡಿದ್ದು, ನೂರಾರು ಜನರು ಸಾವನ್ನಪ್ಪಿದ್ದಾರೆ. ಪಾಕಿಸ್ತಾನದೊಳಗೆ ಮಾರಕ ದಾಳಿಗಳನ್ನು ನಡೆಸುವ ಉಗ್ರಗಾಮಿಗಳಿಗೆ, ವಿಶೇಷವಾಗಿ ತೆಹ್ರಿಕ್-ಇ-ತಾಲಿಬಾನ್ ಪಾಕಿಸ್ತಾನ ಅಥವಾ ಟಿಟಿಪಿ ಎಂದು ಕರೆಯಲ್ಪಡುವ ಪಾಕಿಸ್ತಾನಿ ತಾಲಿಬಾನ್‌ಗೆ ಅಫ್ಘಾನಿಸ್ತಾನ ಆಶ್ರಯ ನೀಡುತ್ತಿದೆ ಎಂದು ಪಾಕಿಸ್ತಾನ ಆರೋಪಿಸಿದೆ. ಈ ಗುಂಪು ಅಫ್ಘಾನ್ ತಾಲಿಬಾನ್‌ನಿಂದ ಪ್ರತ್ಯೇಕವಾಗಿದೆ, ಆದರೆ ಅದರೊಂದಿಗೆ ಮೈತ್ರಿ ಮಾಡಿಕೊಂಡಿದೆ, ಇದು 2021 ರಲ್ಲಿ ಯುಎಸ್ ನೇತೃತ್ವದ ಪಡೆಗಳ ಅಸ್ತವ್ಯಸ್ತವಾದ ಹಿಂತೆಗೆದುಕೊಳ್ಳುವಿಕೆಯ ನಡುವೆ ದೇಶದಲ್ಲಿ ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಅಫ್ಘಾನಿಸ್ತಾನವನ್ನು ಆಳುತ್ತಿದೆ. ಕಾಬೂಲ್ ಆರೋಪವನ್ನು ನಿರಾಕರಿಸುತ್ತದೆ.

# ರಾಷ್ಟ್ರೀಯ ಪ್ರಗತಿ ಜೊತೆ ಜನರ ಜೀವನ ಉನ್ನತೀಕರಣ : ಮೋದಿ ಸರ್ಕಾರದ ಮಹತ್ತರ ಸಾಧನೆ

ಬೆಂಗಳೂರು: ಪ್ರಧಾನಿ ನರೇಂದ್ರಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಸಾಧನೆಯೆಂದರೆ ರಾಷ್ಟ್ರೀಯ ಪ್ರಗತಿ ಹಾಗೂ ದೇಶದ ನಾಗರಿಕರ ದೈನಂದಿನ ಜೀವನದಲ್ಲಿ ಅಮೂಲಾಗ್ರ ಬದಲಾವಣೆ ಎಂದು ಬಿಜೆಪಿ ಹೇಳಿದೆ.

ಎನ್‌ಡಿಎ ಸರ್ಕಾರವು ರಚನಾತಕ ಸುಧಾರಣೆ, ಪ್ರಮಾಣದಲ್ಲಿ ಕಲ್ಯಾಣ, ರಾಷ್ಟ್ರೀಯ ಭದ್ರತಾ ವಿಶ್ವಾಸ, ಡಿಜಿಟಲ್ ರೂಪಾಂತರ ಮತ್ತು ಜಾಗತಿಕ ಸ್ಥಾನಮಾನವನ್ನು ಸಾಧಿಸಿದೆ. ಈ 12 ವರ್ಷಗಳು ಸ್ಪಷ್ಟ ಆಡಳಿತ ನೀಡಿದೆ. 2014 ರಿಂದ 2019 ರವರೆಗೆ ವ್ಯವಸ್ಥೆಯ ಶುದ್ಧೀಕರಣ, 2019 ರಿಂದ 2022 ರವರೆಗೆ ಸ್ಥಿತಿಸ್ಥಾಪಕ ಬಿಕ್ಕಟ್ಟು ನಿರ್ವಹಣೆ ಮತ್ತು 2022 ರಿಂದ 2026 ರವರೆಗೆ ರಾಷ್ಟ್ರ ನಿರ್ಮಾಣವನ್ನು ವೇಗಗೊಳಿಸಲಾಗಿದೆ ಎಂದು ಹೇಳಿಕೊಂಡಿದೆ. ಜನ್ ಧನ್ ಮೂಲಕ, 56 ಕೋಟಿಗೂ ಹೆಚ್ಚು ಬ್ಯಾಂಕ್ ಖಾತೆಗಳು ಬಡ ಕುಟುಂಬಗಳನ್ನು ಔಪಚಾರಿಕ ಬ್ಯಾಂಕಿಂಗ್ ವ್ಯವಸ್ಥೆಗೆ ಸಂಪರ್ಕಿಸಿದವು ಮತ್ತು ಪ್ರಯೋಜನಗಳಿಗೆ ನೇರ ಪ್ರವೇಶವನ್ನು ಸಕ್ರಿಯಗೊಳಿಸಿದವು. ನೇರ ಲಾಭ ವರ್ಗಾವಣೆ 2.5 ಲಕ್ಷ ಕೋಟಿಗೂ ಹೆಚ್ಚು ಉಳಿತಾಯ ಮಾಡಿ, ಸೋರಿಕೆ ಕಡಿಮೆ ಮಾಡಿ, ಕಲ್ಯಾಣವು ಉದ್ದೇಶಿತ ಫಲಾನುಭವಿಗೆ ನೇರವಾಗಿ ತಲುಪುವುದನ್ನು ಖಚಿತಪಡಿಸಿಕೊಂಡಿದೆ ಎಂದು ತಿಳಿಸಿದೆ.

ಜಿಎಸ್‌ಟಿ ಭಾರತವನ್ನು ಒಂದೇ ಮಾರುಕಟ್ಟೆಯಾಗಿ ಏಕೀಕರಿಸಿತು, ಸರಕುಗಳ ಚಲನೆಯನ್ನು ಸರಳಗೊಳಿಸಿತು, ಔಪಚಾ-ರಿಕೀಕರಣವನ್ನು ಬಲಪಡಿಸಿತು ಮತ್ತು ಮಾಸಿಕ 1.7 ಲಕ್ಷ ಕೋಟಿಗೂ ಹೆಚ್ಚು ಸಂಗ್ರಹದೊಂದಿಗೆ ಆದಾಯದ ಏರಿಕೆಯನ್ನು ಸಾಧಿಸಿತು. ಸ್ವಚ್ಛ ಭಾರತ ಅಭಿಯಾನದಡಿ 11 ಕೋಟಿಗೂ



ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಯಿತು. ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ, ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು 80 ಕೋಟಿಗೂ ಹೆಚ್ಚು ಜನರಿಗೆ ಉಚಿತ ಪಡಿತರ ಒದಗಿಸಿತು ಮತ್ತು ದುರ್ಬಲ ಕುಟುಂಬಗಳನ್ನು ರಕ್ಷಿಸಲು ಡಿಬಿಟಿ ಮೂಲಸೌಕರ್ಯವನ್ನು ಬಳಸಿದೆ ಎಂದು ಅಂಕಿಸಂಖ್ಯೆಗಳ ಮಾಹಿತಿ ನೀಡಿದೆ.

20 ಲಕ್ಷ ಕೋಟಿ ಆತನಿರ್ಭರ ಭಾರತ ಪ್ಯಾಕೇಜ್ ಮತ್ತು ಪಿಎಲ್‌ಐ ಯೋಜನೆಗಳು ವ್ಯವಹಾರಗಳು, ಉದ್ಯೋಗಗಳು, ಎಲೆಕ್ಟ್ರಾನಿಕ್ಸ್ , ಫಾರ್ಮಾ ಮತ್ತು ಉತ್ಪಾದನೆಯನ್ನು ಬೆಂಬಲಿಸುವ ಮೂಲಕ ಬಿಕ್ಕಟ್ಟನ್ನು ಅವಕಾಶವಾಗಿ ಪರಿವರ್ತಿಸಿದವು. ಭಾರತದ ಮೊಬೈಲ್ ಉತ್ಪಾದನೆ ಮತ್ತು ರಫ್ತುಗಳು ತೀವ್ರವಾಗಿ ಬೆಳೆದಿವೆ, ರಫ್ತುಗಳು ರೂ. 1.9 ಲಕ್ಷ ಕೋಟಿ ದಾಟಿವೆ, ಭಾರತವು ಆಮದು ಅವಲಂಬನೆಯಿಂದ ಉತ್ಪಾದನಾ ಬಲಕ್ಕೆ ಚಲಿಸುತ್ತಿದೆ ಎಂದು ತೋ-ರಿಸುತ್ತದೆ. ರಾಷ್ಟ್ರೀಯ ಭದ್ರತೆ, ಬಾಲಕೋಟ್, 370ನೇ ವಿಧಿ, ರಕ್ಷಣಾ ಆಧುನೀಕರಣ, ಐಎನ್ ಎಸ್ ವಿಕ್ರಾಂತ್ ಮತ್ತು ಆಪರೇಷನ್ ಸಿಂಧೂರ್ ನಂತಹ ಕಾರ್ಯಾಚರಣೆಗಳು ಬೆದರಿಕೆಗಳ ಬಗ್ಗೆ ಶೂನ್ಯ ಸಹಿಷ್ಣುತೆಯೊಂದಿಗೆ ಆತವಿಶ್ವಾಸದ ಭಾರತವನ್ನು ಪ್ರತಿಬಿಂಬಿಸುತ್ತವೆ ಎಂದು ಮೋದಿ ಸರ್ಕಾರದ ಸಾಧನೆಗಳನ್ನು ಹಾಡಿ ಹೊಗಳಿದೆ. ಹೆಚ್ಚುತ್ತಿರುವ ರಫ್ತುಗಳು ಮತ್ತು ಪಾಲುದಾ-ರಿಕೆಗಳ ಮೂಲಕ ಭಾರತದ ಜಾಗತಿಕ ಪಾತ್ರವನ್ನು ವಿಸ್ತರಿಸಿದೆ, ಭಾರತವನ್ನು ವಿಶ್ವಾಸಾರ್ಹ ವಿಶ್ವ ಬಂಧು ಎಂದು ಸ್ಥಾನೀಕರಿಸಿದೆ. ಹೆದ್ದಾರಿಗಳು, ಎಕ್?ಸಪ್ರೆಸ್‌ವೇಗಳು, ವಂದೇ ಭಾರತ್ ರೈಲುಗಳು, ಲಾಜಿಸ್ಟಿಕ್?ಸ ಕಾರಿಡಾರ್‌ಗಳು ಮತ್ತು ಪಿಎಂ ಗತಿ ಶಕ್ತಿ ಪ್ರಯಾಣದ ಸಮಯ ಮತ್ತು ವೆಚ್ಚವನ್ನು ಕಡಿಮೆ ಮಾಡುವುದರೊಂದಿಗೆ ಮೂಲಸೌಕರ್ಯವು ಅಭೂತಪೂರ್ವ ಪ್ರಮಾಣದಲ್ಲಿ ಸಾಗಿದೆ. ಪಿಎಂ ಆವಾಸ್, ಜಲ ಜೀವನ್ ಮಿಷನ್, ವಿದ್ಯುತ್, ವಸತಿ ಮತ್ತು ನೀರಿನ ಪ್ರವೇಶವು ದೈನಂದಿನ ಜೀವನವನ್ನು ಸುಧಾರಿಸಿದೆ ಎಂದು ಬಣ್ಣಿಸಿದೆ. ಯುಪಿಐ ಡಿಜಿಟಲ್ ಪಾವತಿಗಳನ್ನು ಪರಿವರ್ತಿಸಿದೆ, ಬೀದಿ ವ್ಯಾಪಾ-ರಿಗಳು, ಸಣ್ಣ ವ್ಯಾಪಾರಿಗಳು, ರೈತರು ಮತ್ತು ಸಾಮಾನ್ಯ ನಾಗರಿಕರು ಡಿಜಿಟಲ್ ಆರ್ಥಿಕತೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿದೆ.

ಸೆಮಿಕಂಡಕ್ಟರ್ ಮಿಷನ್, ಸ್ಟಾರ್ಟ್‌ಅಪ್ ಬೆಳವಣಿಗೆ, ಎಲೆಕ್ಟ್ರಾನಿಕ್?ಸ ಪರಿಸರ ವ್ಯವಸ್ಥೆ, ಎಐ, ಚಿಪ್‌ಗಳು, ಇವಿಗಳು, ಹಸಿರು ಶಕ್ತಿ ಮತ್ತು ರಕ್ಷಣಾ ಉತ್ಪಾದನೆಯು ಭಾರತದ ಭವಿಷ್ಯಕ್ಕೆ ಸಿದ್ಧವಾದ ಆರ್ಥಿಕ ದಿಕ್ಕನ್ನು ತೋರಿಸುತ್ತದೆ. ನಾರಿ ಶಕ್ತಿ ವಂದನ ಅಧಿನಿಯಮವು ಲೋಕಸಭೆ ಮತ್ತು ರಾಜ್ಯ ಸಭೆಗಳಲ್ಲಿ ಶೇ.33ರ ಮೀಸಲಾತಿ ಒದಗಿಸುವ ಮೂಲಕ ಮಹಿಳಾ ಪ್ರಾತಿನಿಧ್ಯದ ಕಡೆಗೆ ಒಂದು ಐತಿಹಾಸಿಕ ಹೆಜ್ಜೆಯನ್ನು ಸೂಚಿಸುತ್ತದೆ. ಪ್ರಧಾನಿ ಮೋದಿ ಆಡಳಿತದಲ್ಲಿ ಭಾರತದ ನಾಗರಿಕತೆಯ ಪರಂಪರೆ ಬಲಗೊಂಡಿದೆ. ಅಯೋಧ್ಯೆಯಲ್ಲಿರುವ ಅದ್ಭುತ ಶ್ರೀರಾಮ ಮಂದಿರ, ಶ್ರೀ ಕಾಶಿ ವಿಶ್ವನಾಥ ಕಾರಿಡಾರ್ ಮತ್ತು ಇನ್ನೂ ಹೆಚ್ಚಿನವುಗಳಿಂದ ಇದು ಸ್ಪಷ್ಟವಾಗಿದೆ ಎಂದು ಹೇಳಿದೆ.

ಕಳೆದ 12 ವರ್ಷಗಳು ಕೇವಲ ಯೋಜನೆಗಳ ವರ್ಷಗಳಲ್ಲ. ಅವು ವ್ಯವಸ್ಥೆಗಳನ್ನು ಸ್ಥಿರಗೊಳಿಸುವ ವರ್ಷಗಳಾಗಿವೆ. ನೇರ ವಿತರಣೆ, ಡಿಜಿಟಲ್ ಇಂಡಿಯಾ, ನಿರ್ಣಾಯಕ ನಾಯಕತ್ವ ಮತ್ತು ಬಡವರಿಗೆ ಘನತೆ ಈ ಸರ್ಕಾರದ ದಾಖಲೆಯನ್ನು ವ್ಯಾಖ್ಯಾನಿಸುತ್ತವೆ. ಭಾರತವು ಉದಯೋನ್ಮುಖ ಮಾರುಕಟ್ಟೆಯಾಗಿ ಚರ್ಚಿಸಲ್ಪಡುವುದರಿಂದ ಉದಯೋನ್ಮುಖ ಶಕ್ತಿಯಾಗಿ ಗೌರವಿಸಲ್ಪಡುವತ್ತ ಸಾಗಿದೆ ಎಂದು ಮೋದಿ ಸರ್ಕಾರದ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

# ರಾಜ್ಯಸಭೆಗೆ ಸ್ಪರ್ಧಿಸುವ ಅಪೇಕ್ಷೆ ಇರಲಿಲ್ಲ, ಬಿಜೆಪಿ-ಜೆಡಿಎಸ್ ಮೈತ್ರಿ ಮತ್ತಷ್ಟು ಗಟ್ಟಿಯಾಗಿರಲಿದೆ : ದೇವೇಗೌಡರು

ಬೆಂಗಳೂರು: ರಾಜ್ಯಸಭಾ ಸದಸ್ಯರಾಗಿ ಮುಂದುವರೆಯಲು ಅಪೇಕ್ಷೆ ಪಟ್ಟಿರಲಿಲ್ಲ ಎಂದು ಸ್ಪಷ್ಟಪಡಿಸಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಎನ್‌ಡಿಎ ಮೈತ್ರಿಕೂಟದೊಂದಿಗಿನ ಜೆಡಿಎಸ್ ಸಂಬಂಧ ಮುಂದುವರೆಯಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಹಾಗೂ ನನ್ನ ಸಂಬಂಧ ರಾಜ್ಯಸಭಾ ಸದಸ್ಯ ಸ್ಥಾನಕ್ಕಿಂತ ಮಿಗಿಲಾಗಿದೆ. ಕಳೆದ 10 ವರ್ಷಗಳಿಂದಲೂ ಅವರ ಮತ್ತು ನನ್ನ ವೈಯಕ್ತಿಕ ಸಂಬಂಧ ಸುಮಧುರವಾಗಿದ್ದು, ಮುಂದೆಯೂ ಮುಂದು ವರೆಯಲಿದೆ ಎಂದು ಸ್ಪಷ್ಟಪಡಿಸಿದರು. ಮೇ 26 ರಂದು ದೆಹಲಿಯಲ್ಲಿ ಕೇಂದ್ರ ಕೃಷಿ ಸಚಿವರ ಪುಸ್ತಕ ಬಿಡುಗಡೆ ಮಾಡಿದ್ದೆ. ಆನಂತರ ಬಿಜೆಪಿಯ ಯಾವೊಬ್ಬ ನಾಯಕರನ್ನೂ ಭೇಟಿ ಮಾಡದೆ ಬೆಂಗಳೂರಿಗೆ ವಾಪಸ್ಸು ಮರಳಿದ್ದೆ. ಒಂದು ವೇಳೆ ರಾಜ್ಯಸಭಾ ಸ್ಥಾನದ ವ್ಯಾಮೋಹ ಇದ್ದಿದ್ದರೆ ಬಿಜೆಪಿ ನಾಯಕರನ್ನು ಭೇಟಿ ಮಾಡುತ್ತಿರಲಿಲ್ಲವೇ ? ಎಂದು ಅವರು ಪ್ರಶ್ನಿಸಿದರು. ರಾಜ್ಯ ವಿಧಾನಸಭೆಯಲ್ಲಿ ಜೆಡಿಎಸ್‌ನ 18 ಶಾಸಕರಿದ್ದು, ರಾಜ್ಯಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ನೀಡಿದ್ದ ಹೇಳಿಕೆಯನ್ನು ಸ್ವಾಗತಿಸಿದ್ದೇನೆ ಎಂದರು.

ನನ್ನ ಮತ್ತು ಮೋದಿಯವರ ಸಂಬಂಧ ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಸೀಮಿತವಿಲ್ಲ. ಅದಕ್ಕಿಂತ ಮಿಗಿಲಾಗಿದೆ. ರಾಜ್ಯದ ಜನರು ಈ ಬಗ್ಗೆ ತಪ್ಪು ತಿಳಿಯಬಾರದು ಎಂದು ಅವರು ಹೇಳಿದರು.
ಸ್ವಂತ ಶಕ್ತಿಯ ಮೇಲೆ ಕೇಂದ್ರದಲ್ಲಿ ಸರ್ಕಾರ ರಚನೆ ಮಾಡಬಹುದಾಗಿದ್ದರೂ ಎನ್‌ಡಿಎ ಮೈತ್ರಿಕೂಟದ ಜೊತೆ ನಮನ್ನು ಸೇರಿಸಿಕೊಂಡಿದ್ದಾರೆ. ಗೋದ್ರಾ ಹತ್ಯೆ ಪ್ರಕರಣದಲ್ಲಿ ಮೋದಿಯವರನ್ನು ಸಾಕಷ್ಟು ಟೀಕೆ ಮಾಡಿದ್ದೆ. ಕಳೆದ 10 ವರ್ಷದಿಂದ ಅವರ ಮತ್ತು ನನ್ನ ಸಂಬಂಧ ಮುಂದುವರೆಯುತ್ತಾ ಬಂದಿದೆ. ಮೋದಿಯವರ ಆಡಳಿತದ ಬಗ್ಗೆ ನನ್ನ ಭಾವನೆಯನ್ನು ನಿರ್ಭಯವಾಗಿ ಹೇಳಿದ್ದೇನೆ. ಮೋದಿಯವರ ನಾಯಕತ್ವವನ್ನು ಸಮರ್ಥಿಸಿಕೊಂಡು ಮಾತನಾಡಿದ್ದೇನೆ ಎಂದರು.

140 ಕೋಟಿ ಜನಸಂಖ್ಯೆಯಿರುವ ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. 2047ರ ವೇಳೆಗೆ 5 ಟ್ರಿಲಿಯನ್ ಆರ್ಥಿಕ ಶಕ್ತಿಗೆ ತೆಗೆದುಕೊಂಡು ಹೋಗಬೇಕು ಎಂಬ ಉದ್ದೇಶ ಹೊಂದಿದ್ದಾರೆ. ಕೇವಲ ನಮ ದೇಶದಲ್ಲಿ ಅಷ್ಟೇ ಅಲ್ಲ, ವಿದೇಶದಲ್ಲೂ ಮೋದಿಯವರನ್ನು ನಾಯಕರೆಂದು ಒಪ್ಪಿದ್ದಾರೆ. ಆ ಮಟ್ಟಕ್ಕೆ ಬೆಳೆದಿರುವ ಮತ್ತೊಬ್ಬ ಪ್ರತಿಸ್ಪರ್ಧಿ ನಾಯಕ-ರಿಲ್ಲ ಎಂದು ಸ್ಪಷ್ಟಪಡಿಸಿದರು. ರಾಜ್ಯಸಭಾ ಸದಸ್ಯರಾಗಿಲ್ಲದಿದ್ದರೂ ಮೋದಿ ಮತ್ತು ನನ್ನ ಸಂಬಂಧ ಮುಂದುವರೆಯಲಿದ್ದು, ರಾಜ್ಯಕ್ಕೆ ಸಂಬಂಧಿಸಿದ ಯಾವುದೇ ವಿಚಾರಕ್ಕೆ ಪತ್ರ ಬರೆಯುವುದು, ಭೇಟಿ ಮಾಡುವುದು ಮುಂದುವರೆಯಲಿದೆ. ಕೇಂದ್ರ ಸಂಪುಟದಲ್ಲಿ ಕುಮಾರಸ್ವಾಮಿ ಸಚಿವರಾಗಿ ಮುಂದುವರೆಯುತ್ತಾರೆ ಎಂದು ಅವರು ಹೇಳಿದರು.

ಕಳೆದ 2-3 ದಿನಗಳಿಂದಲೂ ದೇವೇಗೌಡರಿಗೆ ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಅವಕಾಶ ಸಿಗಲಿಲ್ಲ ಎಂದು ಮಾಧ್ಯಮಗಳಲ್ಲಿ ವರದಿಗಳು ಬಿತ್ತರವಾದ ಹಿನ್ನೆಲೆಯಲ್ಲಿ ಈ ಸ್ಪಷ್ಟನೆ ನೀಡಿದ್ದೇನೆ ಎಂದರು.
ಕಳೆದ 7 ದಶಕಗಳಿಂದಲೂ ನಾನು ರಾಜ-ಕೀಯದಲ್ಲಿ ಇದ್ದೇನೆ. 1953-54 ರಲ್ಲಿ ಗುತ್ತಿಗೆದಾರ ವೃತ್ತಿಯಿಂದ ಜನಪರ ಸೇವೆ ಆರಂಭಿಸಿದೆ. ಈಗ 93 ವರ್ಷ ವಯಸ್ಸಾಗಿದೆ. ಆದರೂ ಜನಸೇವೆ ಮಾಡುವ ಹಂಬಲ ಮಾತ್ರ ಕಡಿಮೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

**ಮೋದಿಗೆ ಶ್ಲಾಘನೆ :**



ಜವಾಹರಲಾಲ್ ನೆಹರೂ ಅವರಿಗಿಂತ ಹೆಚ್ಚು ಅವಧಿ ಮೋದಿಯವರು ಪ್ರಧಾನಿಯಾಗಿ ಕೆಲಸ ಮಾಡಿದ್ದಾರೆ. ದೇಶದ ಪ್ರಗತಿಗೆ ಹಲವಾರು ಕಾರ್ಯಕ್ರಮ ತಂದಿದ್ದಾರೆ. ಆರ್ಥಿಕಾಭಿವೃದ್ಧಿಗೂ ಪ್ರಯತ್ನ ಮಾಡಿದ್ದಾರೆ. ವಿಶ್ವಮಟ್ಟದಲ್ಲಿ ದೇಶದ ಗೌರವವನ್ನು ಹೆಚ್ಚಿಸಿದ್ದಾರೆ. ಅವರು ಸಮರ್ಥ ನಾಯಕರಿದ್ದಾರೆ ಎಂದು ಶ್ಲಾಘಿಸಿದರು.

**ಪಕ್ಷ ಸಂಘಟನೆಗೆ ಒತ್ತು :**

ರಾಜ್ಯದಲ್ಲಿ ಜೆಡಿಎಸ್ ಪಕ್ಷದ ಬೆಳವಣಿಗೆಗೆ ಏನೇನು ಬೇಕೋ ಅದನ್ನು ಮಾಡುತ್ತೇನೆ. ಅದಕ್ಕೆ ಯಾರ ಹಂಗೂ ಇಲ್ಲ. ನಿರ್ಭಯವಾಗಿ ಪಕ್ಷಸಂಘಟನೆ ಮಾಡುತ್ತೇವೆ. ಮುಂದೆ ಜಿಬಿಎ, ಜಿ.ಪಂ., ತಾ.ಪಂ. ಸೇ-ರಿದಂತೆ ನಗರ ಸ್ಥಳೀಯ ಸಂಸ್ಥೆ ಚುನಾವಣೆ ನಡೆಯಲಿದ್ದು, ಬಿಜೆಪಿ ಮತ್ತು ಜೆಡಿಎಸ್ ನಡುವೆ ಸೀಟು ಹೊಂದಾಣಿಕೆ ಮೈತ್ರಿ ಆಗಬೇಕು. ಅವರು ಕರೆದಾಗ ಹೋಗುತ್ತೇನೆ. ಎಲ್ಲಿ ನನ್ನ ಅವಶ್ಯಕತೆ ಇದೆಯೋ ಅಲ್ಲಿ ಶಕ್ತಿ ಮೀರಿ ಕೆಲಸ ಮಾಡುತ್ತೇನೆ ಎಂದು ಅವರು ಹೇಳಿದರು. ಹಲಸು ಹಾಗೂ ಹುಣಸೆ ಹಣ್ಣಿನ ಮಂಡಳಿ ರಚನೆ ಮಾಡುವ ಭರವಸೆಯನ್ನು ಕೇಂದ್ರ ಸಚಿವರು ಈಡೇರಿಸಿಲ್ಲ. ಈ ಬಗ್ಗೆ ಮತ್ತೊಮ್ಮೆ ಅವರಿಗೆ ಪತ್ರ ಬರೆದು ಮನವಿ ಮಾಡುತ್ತೇನೆ. ಕೇರಳ, ತಮಿಳುನಾಡು, ಕರ್ನಾಟಕದಲ್ಲಿ ಹೆಚ್ಚು ಸಮಸ್ಯೆ ಇದೆ ಎಂದರು.

ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಮಾವು, ಹಲಸಿನ ಮೇಳಕ್ಕೆ ಭೇಟಿ ನೀಡಿದ್ದೆ. ಅಲ್ಲಿ ಹಲಸಿನ ಹಣ್ಣು ಕಡಿಮೆ ಇದ್ದಿದ್ದು ಕಂಡುಬಂದಿತು. ಹಳೇ ಮೈಸೂರು ಭಾಗದಲ್ಲಿ ರಾಶಿ ರಾಶಿ ಹಲಸಿನಹಣ್ಣನ್ನು ನೋಡಬಹುದು. ಹಲಸಿನ ಹಣ್ಣಲ್ಲದೆ ಎಳೆಯ ಕಾಯಿಯನ್ನು ಅಡುಗೆಗೂ ಬಳಸುತ್ತಾರೆ. ಮಖಾನ ವಿಚಾರದಲ್ಲಿ ಒಂದು ವಾರದಲ್ಲಿ ನಿರ್ಣಯ ಮಾಡಿದ್ದರು. ಆದರೆ ಹಲಸು ಮಂಡಳಿ ರಚನೆ ವಿಚಾರದಲ್ಲಿ ನೀಡಿದ್ದ ಭರವಸೆ ಈಡೇರಿಸಿಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯರಾದ ಚೌಡರೆಡ್ಡಿ ತೂಪಲ್ಲಿ, ಎಚ್.ಎಂ.ರಮೇಶ್‌ಗೌಡ, ಕೆ.ಎ.ತಿಪ್ಪೇಸ್ವಾಮಿ, ಕಾನೂನು ಘಟಕದ ರಾಜ್ಯಾಧ್ಯಕ್ಷ ಎ.ಪಿ.ರಂಗನಾಥ, ಮುಖಂಡರಾದ ಗುರುರಾಜ ಹುಣಸಿಮರದ್, ಚಂದನ್ ಮತ್ತಿತರರಿದ್ದರು.

# ಬಾರ್-ಪಬ್ ಎಂಟ್ರಿಗೆ ಗುರುತಿನ ಚೀಟಿ ಕಡ್ಡಾಯ : ಗೃಹಸಚಿವ ಪ್ರಿಯಾಂಕ ಖರ್ಗೆ

ಬೆಂಗಳೂರು: ಬಾರ್ ಮತ್ತು ಪಬ್‌ಗಳಿಗೆ ವಿದ್ಯಾರ್ಥಿಗಳು ಹೋಗುತ್ತಾರೆ ಎಂಬ ಹಿನ್ನೆಲೆಯಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯ ಮಾಡಲಾಗಿದೆ ಎಂದು ಗೃಹಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೋಷಕರಿಂದ ಹಲವಾರು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ 21 ವರ್ಷದೊಳಗಿನವರಿಗೆ ಗುರುತಿನ ಚೀಟಿಯನ್ನು ಪರಿಶೀಲಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಇದು ಯುವಕರ ಭವಿಷ್ಯದ ಪ್ರಶ್ನೆಯಾಗಿದೆ. ಅವರನ್ನು ನಿಯಂತ್ರಣ ಮಾಡದಿದ್ದರೆ ಹಾದಿ ತಪ್ಪಬಹುದು. ಇದಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದ ಅವರು, ಬಿಟ್‌ಕಾಯಿನ್ ವಿಚಾರದಲ್ಲಿ ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ನಾವು ಪಾರದರ್ಶಕವಾಗಿ ತನಿಖೆ ಮಾಡಿದ್ದೇವೆ.



ತಪ್ಪು ಮಾಡಿದವರನ್ನು ಯಾರೂ ಕೂಡಾ ಸಮರ್ಥನೆ ಮಾಡಿಕೊಳ್ಳುವುದಿಲ್ಲ ಎಂದರು. ಐಟಿ, ಸಿಬಿಐ ಯಾರ ಗೊಂಬೆ ಎಂದು ಪ್ರಶ್ನಿಸಿದ ಅವರು, ಕೆಲವರ ವಿರುದ್ಧ ಮಾತ್ರ ದೋಷಾರೋಪ ಪಟ್ಟಿ ಸಲ್ಲಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಆರ್‌ಎಸ್‌ಎಸ್‌ನವರು ಏಕೆ ನೋಂದಣಿ ಮಾಡಿಕೊಳ್ಳಲು ಭಯ ಪಡುತ್ತಿದ್ದಾರೆ. ಯಾವುದೇ ಸರ್ಕಾರಿ ಸಂಸ್ಥೆಗೆ ಉತ್ತರ ಕೊಡುವಂತಿಲ್ಲ ಎಂದು ಬಿಜೆಪಿಯವರು ಹೇಳಲಿ. ನಮಗೆ ಯಾವುದೇ ಸಂವಿಧಾನ, ಯಾವುದೇ ಕಾನೂನು ಅನ್ವಯವಾಗುವುದಿಲ್ಲ ಎಂದು ಹೇಳಿದರು.

ಇಲ್ಲವೆಂದರೆ ಅವರೇ ತಿದ್ದಿಕೊಳ್ಳಲಿ. ಬೀದಿಬದಿ ವ್ಯಾಪಾರಿಗಳು ಕೂಡಾ ನೋಂದಣಿ ಮಾಡಿಕೊಳ್ಳುತ್ತಾರೆ. ದೇವಸ್ಥಾನದ ದೇಣಿಗೆಯ ಲೆಕ್ಕವನ್ನೂ ಕೊಡಲಾಗುತ್ತದೆ. ಆರ್‌ಎಸ್‌ಎಸ್‌ನವರು ಆದಾಯ ತೆ-ರಿಗೆ ಇಲಾಖೆಗೆ ಲೆಕ್ಕ ಕೊಡಬಾರದೇ? ಎಂದು ಪ್ರಶ್ನಿಸಿದರು.ವಿಧಾನಪರಿಷತ್ ಸದಸ್ಯ ಸಿ.ಟಿ.ರವಿಯವರು ಅವರಿಗೆ ಆರ್‌ಎಸ್-ಎಸ್‌ನವರ ಇತಿಹಾಸ ಗೊತ್ತಿಲ್ಲ ಎನ್ನಿಸುತ್ತದೆ ಎಂದು ತಿರುಗೇಟು ಕೊಟ್ಟರು.

# ಹೊಸ ಮನೆಯ ಸುಖ–ಶಾಂತಿಗೆ ನವಗ್ರಹ ಶಾಂತಿ ಮತ್ತು ವಾಸ್ತು ರಕ್ಷೋಘ್ನ ಹೋಮದ ಮಹತ್ವ

ಹೊಸ ಮನೆ ಎಂಬುದು ಕೇವಲ ಇಟ್ಟಿಗೆ–ಮಣ್ಣಿನ ಕಟ್ಟಡವಲ್ಲ, ಅದು ನಮ್ಮ ಆಸೆ, ಕನಸು ಮತ್ತು ಭವಿಷ್ಯದ ನೆಲೆ. ಇಂತಹ ಮನೆಯೊಳಗೆ ಪ್ರವೇಶಿಸುವಾಗ ಅಲ್ಲಿನ ವಾತಾವರಣ ಪವಿತ್ರವಾಗಿರಲಿ ಎಂದು ನಾವು ಮಾಡುವ ದಿವ್ಯ ಆಚರಣೆಗಳೇ ನವಗ್ರಹ ಶಾಂತಿ ಮತ್ತು ವಾಸ್ತು ರಕ್ಷೋಘ್ನ ಹೋಮ.

ನಮಸ್ಕಾರ ಬಂಧುಗಳೇ, ಮನೆ ಕಟ್ಟುವುದು ಜೀವನದ ಒಂದು ದೊಡ್ಡ ಗುರಿ. ಆದರೆ ಆ ಮನೆಯಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿ ನೆಲೆಸಬೇಕಾದರೆ ಅಲ್ಲಿನ ಶಕ್ತಿ (ಇಟಿಜಡಿ–ರಥಿ) ಶುದ್ಧವಾಗಿರಬೇಕು. ಅದಕ್ಕಾಗಿಯೇ ಗೃಹಪ್ರವೇಶದ ಸಮಯದಲ್ಲಿ ವಾಸ್ತು ರಕ್ಷೋಘ್ನ ಮತ್ತು ನವಗ್ರಹ ಹೋಮ ಮಾಡುವುದು ಅನಿವಾರ್ಯ.

1. ವಾಸ್ತು ರಕ್ಷೋಘ್ನ ಹೋಮ: ಮನೆಯ ಸುತ್ತ ಎತ್ತರದ ಗೋಡೆಗಿಂತಲೂ ಮುಖ್ಯ! 'ರಕ್ಷೋಘ್ನ' ಎಂದರೆ ನಕಾರಾತ್ಮಕ ಶಕ್ತಿಗಳನ್ನು (ಓಜರಚಿಣುತಜ ಇಟಿಜಡಿರುಥ) ಸಂಹ–ರಿಸುವುದು ಎಂದರ್ಥ. ಏಕೆ ಮಾಡಬೇಕು?: ನಾವು ಮನೆ ಕಟ್ಟುವ ಭೂಮಿಯಲ್ಲಿ ದಶಕಗಳಿಂದ ಅನೇಕ ಜೀವಿಗಳು, ಶಕ್ತಿಗಳು ನೆಲೆಸಿರಬಹುದು. ಕಟ್ಟಡ ಕಟ್ಟುವಾಗ ಆದ ವಾಸ್ತು ದೋಷಗಳು ಅಥವಾ ಭೂಮಿಯ ಮೇಲಿರುವ ಕೆಟ್ಟ ದೃಷ್ಟಿಯನ್ನು ತೊಡೆದುಹಾಕಲು ಈ ಹೋಮ ಮದ್ದಿನಂತೆ ಕೆಲಸ ಮಾಡುತ್ತದೆ.

**ರಹಸ್ಯ:**

ಇದರಲ್ಲಿ ಬಳಸುವ 'ಸಮಿಧೆ' ಮತ್ತು 'ಸಾಸಿವೆ'ಗಳ ದಹನವು ಮನೆಯ ಮೂಲೆ ಮೂಲೆಯಲ್ಲಿರುವ ನೆಗೆಟಿವ್ ಎನರ್ಜಿಯನ್ನು ಭಸ್ಮ ಮಾಡುತ್ತದೆ.



**2. ನವಗ್ರಹ ಹೋಮ:**

ನಮ್ಮ ಮನೆ ಎನ್ನುವುದು ಬ್ರಹ್ಮಾಂಡದ ಒಂದು ಸಣ್ಣ ಪ್ರತಿರೂಪ. ನವಗ್ರಹ ಹೋಮ ಮಾಡುವುದರ ಅರ್ಥ – ಸೂರ್ಯ, ಚಂದ್ರ ಸೇರಿದಂತೆ ಒಂಬತ್ತೂ ಗ್ರಹಗಳನ್ನು ನಮ್ಮ ಮನೆಗೆ ಆಹ್ವಾನಿಸಿ, "ನಿಮ್ಮ ಅನುಗ್ರಹದ ಕಿರಣಗಳು ಈ ಮನೆಯ ಮೇಲೆ ಸದಾ ಇರಲಿ" ಎಂದು ಪ್ರಾರ್ಥಿಸುವುದು.

**ಪ್ರಯೋಜನ:**

ಮನೆಯ ಯಜಮಾನನ ಜಾತಕದಲ್ಲಿ ಯಾವುದಾದರೂ ಗ್ರಹದೋಷವಿದ್ದರೂ, ಈ ಹೋಮದ ಮೂಲಕ ಅದನ್ನು ಶಾಂತಗೊಳಿಸಿ ಮನೆಯೊಳಗೆ ಪ್ರವೇಶಿಸಿದಾಗ ಜೀವನ ಸುಗಮವಾಗುತ್ತದೆ. ಪುರಾಣದ ಕಥೆ: ವಾಸ್ತು ಪುರುಷನ ಉಗಮ ಪುರಾಣಗಳ ಪ್ರಕಾರ, ಅಂಧಕಾಸುರ ಮತ್ತು ಶಿವನ ಯುದ್ಧದ ಸಮಯದಲ್ಲಿ ಶಿವನ ಹಣೆಯ ಬೆವರಿನ ಹನಿ ಭೂಮಿಗೆ ಬಿದ್ದಾಗ ಒಬ್ಬ ಬೃಹತ್ ಆಕಾರದ ಪುರುಷ ಜನಿಸಿದ. ಅವನೇ ವಾಸ್ತು ಪುರುಷ. ಅವನು ಭೂಮಿಯ ಮೇಲೆ ಮಲಗಿದಾಗ ಬ್ರಹ್ಮಾದಿ ದೇವತೆಗಳು ಅವನ ಮೇಲೆ ಕುಳಿತು ಅವನನ್ನು ಶಾಂತಗೊಳಿಸಿದರು.

**ಪಾಠ:**

ಆ ವಾಸ್ತು ಪುರುಷನನ್ನು ನಾವು ತೃಪ್ತಿಪಡಿಸದಿದ್ದರೆ, ಮನೆಯಲ್ಲಿ ಸದಾ ಗೊಂದಲ, ಕಾಯಿಲೆ ಅಥವಾ ಆರ್ಥಿಕ ನಷ್ಟ ಉಂಟಾಗುತ್ತದೆ ಎಂಬುದು ಶಾಸ್ತ್ರದ ಮಾತು. ಈ ಹೋಮಗಳ ಮೂಲಕ ನಾವು ವಾಸ್ತು ಪುರುಷನನ್ನು ತೃಪ್ತಿಪಡಿಸಿ ಆತನ ಆಶೀರ್ವಾದ ಪಡೆಯುತ್ತೇವೆ. ಕಲಿಗಾಲ ಅಥ–'ವಾ ಇಂದಿನ ಆಧುನಿಕ ಜಗತ್ತಿಗೆ ಇದು ಹೇಗೆ ಸಂಬಂಧಿಸಿದೆ? (Modern Connect)

ಇಂದಿನ 'ಸ್ಮಾರ್ಟ್ ಹೋಮ್' ಯುಗದಲ್ಲಿ ನಮಗೆ ಈ ಹೋಮಗಳು ಏಕೆ ಬೇಕು?

1. Stress & Vibration: ಇಂದಿನ ಕಾಲದಲ್ಲಿ ಕೆಲಸದ ಒತ್ತಡ ಜಾಸ್ತಿ. ಹೊರಗಿನ ನೆಗೆಟಿವ್ ವೈಬ್ಸ್‌ಗಳನ್ನು ಹೊತ್ತು ನಾವು ಮನೆಗೆ ಬರುತ್ತೇವೆ. ಹೋಮದ ಮಂತ್ರ ಘೋಷಗಳು ಮತ್ತು ಪವಿತ್ರ ಧೂಮವು ಮನೆಯ 'ವೈಬ್ರೇಶನ್' ಅನ್ನು ಪಾಸಿಟಿವ್ ಆಗಿ ಬದಲಿಸುತ್ತದೆ. ಇದು ಮನೆಯಲ್ಲಿರುವವರ ಮಾನಸಿಕ ನೆಮ್ಮದಿಯನ್ನು ಹೆಚ್ಚಿಸುತ್ತದೆ.

2. Electromagnetic Waves: ಇಂದಿನ ಮನೆಗಳಲ್ಲಿ ಮೊಬೈಲ್, ವೈಫೈ, ಎಲೆಕ್ಟ್ರಾನಿಕ್ ಉಪಕರಣಗಳ ಕಾಟ ಜಾಸ್ತಿ. ಹೋಮದಲ್ಲಿ ಬಳಸುವ ಆಜ್ಯ (ತುಪ್ಪ) ಮತ್ತು ಸಮಿಧೆಗಳ ಹೊಗೆಯು ವಾತಾವರಣದ ಅಶುದ್ಧಿಯನ್ನು ಕಡಿಮೆ ಮಾಡಿ, ಮನೆಯಲ್ಲಿ ಪ್ರಾಣಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ವಿಜ್ಞಾನವೂ ಒಪ್ಪುತ್ತದೆ.

3. Peaceful Living: ಹೊಸ ಮನೆಯಲ್ಲಿ ಸಣ್ಣಪುಟ್ಟ ತಾಂತ್ರಿಕ ತೊಂದರೆಗಳು ಅಥವಾ ಕುಟುಂಬದಲ್ಲಿ ಕಿರಿಕಿರಿ ಉಂಟಾಗದಂತೆ ಈ ಪೂಜೆಗಳು ಒಂದು 'ಫಿಲ್ಟರ್' ರೀತಿ ಕೆಲಸ ಮಾಡುತ್ತವೆ.



ಪ್ರಶಾಂತಭಟ್ ಕೋಟೇಶ್ವರ

# ಭರತ ಭೂಮಿಯ ವೀರ ಮಹಿಳೆಯರು

ನಮ್ಮ ಭರತ ಭೂಮಿ ಕೇವಲ ವೀರ ಶೂರ ಮಹಾರಾಜರಿಂದ ಆಳಲ್ಪಟ್ಟಿಲ್ಲ, ಬದಲಾಗಿ ಅವರಷ್ಟೇ ದಿಟ್ಟತನದಿಂದ, ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸಿದ ಹಲವಾರು ಮಹಿಳೆಯರಿಂದಲೂ ಆಳ್ವಿಕೆಯನ್ನು ಕಂಡಿದೆ. ಋಗ್ವೇದ ಕಾಲದಿಂದ ಸ್ವತಂತ್ರ ಭಾರತದ ಪ್ರಸ್ತುತ ದಿನದವರೆಗೆ ನೂರಾರು ಮಹಿಳೆಯರು ತಮ್ಮದೇ ಆದ ಪ್ರೀತಿಯಲ್ಲಿ ದೇಶಾಭಿಮಾನ,ರಾಜಕೀಯ ಮೌಲ್ಯಗಳು, ಸ್ವತಂತ್ರ ಪರಿಕಲ್ಪನೆಗಳನ್ನು ಹೊಂದಿದ್ದು, ಒಂದೊಮ್ಮೆ ಯುದ್ಧ, ಅರಾಜಕತೆ, ಸಂತಾನಹೀನತೆಯಂತಹ ಅನಿವಾರ್ಯ ಕಾರಣಗಳಿಂದ ತಮಗೆ ಅಧಿಕಾರ ಹಸ್ತಾಂತರವಾದಾಗ ಅದನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಾರೆ.

ತಾವು ಆಳುತ್ತಿರುವ ನಾಡು ವಿಪತ್ತಿನಲ್ಲಿದ್ದಾಗ ಯುದ್ಧ ಮಾಡುವ ಮೂಲಕ ವೀರ ಧರ್ಮವನ್ನು ನಿಭಾಯಿಸುವ ನಮ್ಮ ರಾಣಿ ಮಹಾರಾಣಿಯರು, ನಂತರ ರಾಜ್ಯದ ಆಳ್ವಿಕೆಯಲ್ಲಿ ಪ್ರಜೆಗಳೆಲ್ಲರೂ ನೆಮ್ಮದಿಯಿಂದಿರಲಿ ಎಂಬ ಕಾರಣ–ಕ್ಕಾಗಿ ಧಾರ್ಮಿಕ, ಸಾಮಾಜಿ–ಕ, ಸಾರ್ವಜನಿಕ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಭರತ ಭೂಮಿಯ ಯಶೋಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನವನ್ನು ಕಂಡುಕೊಂಡಿದ್ದಾರೆ. ವಿಪತ್ತಿನ ಕಾಲದಲ್ಲಿ ಧೈರ್ಯ–ಸ್ಥೈರ್ಯ, ಸಮಚಿತ್ತತೆಗಳನ್ನು ಕಾಯ್ದುಕೊಂಡ ಅವರು ಸಮೃದ್ಧಿಯ ಕಾಲದಲ್ಲಿ ಧಾರ್ಮಿಕ ನಂಬಿಕೆ, ಗುರು ಹಿರಿಯರ ಗೌರವ ಸನ್ಮಾನಗಳು, ದಾನ–ದತ್ತಿ ಕಾರ್ಯಕ್ರಮಗಳ ಮೂಲಕ ಭವ್ಯ ಭಾರತದ ಧಾರ್ಮಿಕ ಅಂತಃಪ್ರಜ್ಞೆಯನ್ನು ಉಜ್ಜೀವನಗೊಳಿಸಿದರೆ ಸಾಮಾಜಿ–ಕವಾಗಿ ಕೆರೆ–ಕಟ್ಟೆಗಳನ್ನು ಕಟ್ಟಿಸುವ, ನೆಡುತೋಪುಗಳನ್ನು ನಿರ್ಮಿಸುವ, ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವ, ರಸ್ತೆ ಮಂದಿರಗಳ ನಿರ್ಮಾಣ ಕಾರ್ಯ ಮಾಡುವ, ಶೈಕ್ಷಣಿಕ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ. ಹೀಗೆ ಪ್ರಾಚೀನ ಯುದ್ಧದಿಂದ ಹಿಡಿದು ಇಂದಿನ ಆಧುನಿಕ ಯುಗದ ಗಗನಯಾನದವರೆಗೆ ಹೆಣ್ಣು ಮಕ್ಕಳು ತಮಗಿರುವ ಹತ್ತು ಹಲವು ಸಾಮಾಜಿ–ಕ ಸಾಂಸ್ಕೃತಿಕ ಅಡೆ–ತಡೆಗಳನ್ನು ಮೀರಿ ಅಸಾಧಾರಣ ಧೈರ್ಯ ಸಾಹಸಗಳನ್ನು ಮೆರೆದು ದಂತ ಕಥೆಯಾಗಿ ಇತಿಹಾಸದ ಪುಟದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಅಂತಹ ಕೆಲವು ವೀರನಾರಿಯರ ಕುರಿತ ಪರಿಚಯ ರಾಣಿ ವಿಷ್ಟಲದೇವಿ.... ಋಗ್ವೇದ



ಕಾಲದ ಮಹಾರಾಣಿ ವಿಷ್ಪಲದೇವಿಯು ಅಸಾಧಾರಣ ಧೈರ್ಯ ಶೌರ್ಯಗಳಿಗೆ ಹೆಸರಾಗಿದ್ದು ಒಂದೊಮ್ಮೆ ಆಕೆ ಪಾಲ್ಗೊಂಡಿದ್ದ 'ಖೇಲಾ' ಯುದ್ಧದಲ್ಲಿ ಆಕೆಯ ಕಾಲು ಕಡಿಯಲ್ಪಟ್ಟಿತು. ಕಾಲನ್ನು ಕಡಿದುಕೊಂಡ ನಂತರವೂ ಕೂಡ ಆರೈಕೆಗೊಂಡು ಕಬ್ಬಿಣದ ಕೃತಕ ಕಾಲನ್ನು ಜೋಡಿಸಿಕೊಂಡ ಆಕೆ ಮತ್ತೆ ಯುದ್ಧ ರಂಗದ ಮುಂಚೂಣಿಯಲ್ಲಿ ನಿಂತು ಹೋರಾಡಿದ ಧೀರ ಮಹಿಳೆ. ರಾಣಿ ರುದ್ರಮ್ಮ ದೇವಿ... 13 ನೆ ಶತಮಾನದಲ್ಲಿ ದಖನ್ ಪ್ರಾಂತವನ್ನು ಆಳುತ್ತಿದ್ದ ಕಾಕತಿಯ ರಾಜಮನೆತನದ ರಾಣಿ ರುದ್ರಮ್ಮದೇವಿಯು ಚಿಕ್ಕಂದಿನಿಂದಲೇ ಎಲ್ಲಾ ಬಗೆಯ ಯುದ್ಧ ಕಲೆಗಳಲ್ಲಿ ತರಬೇತಿ ಹೊಂದಿದ್ದಳು. ದೇವಗಿ–ರಿಯ ಸೇನಾ ಬಲದ ವಿರುದ್ಧ ಹೋರಾಡಿದ ಆಕೆ ಅಸಾಧಾರಣ ಧೈರ್ಯ,ಶೌರ್ಯ ಹಾಗೂ ಖ್ಯಾತಿಗಳನ್ನು ಹೊಂದಿದ ವೀರಯೋಧಳಾಗಿದ್ದಳು.

ಉಳ್ಳಾಲದ ರಾಣಿ ಅಬ್ಬಕ್ಕ ಚೌಟ... ಕರಾವಳಿಯ ತೀರ ಪ್ರದೇಶ ಉಳ್ಳಾಲದ ರಾಣಿಯಾಗಿದ್ದ ಅಬ್ಬಕ್ಕ ದೇವಿಯು ಕೂಡ ವೀರ ಮಹಿಳೆ. ಸಾಗರ ಮಾಧ್ಯಮದ ಮೂಲಕ ವಿದೇಶಗಳೊಂದಿಗೆ ಮಸಾಲೆ ಪದಾರ್ಥಗಳ ರಫ್ತು ವ್ಯವಹಾರವನ್ನು ಹೊಂದಿದ ಆಕೆ ಎಲ್ಲಾ ಬಂದರೂ ಪ್ರದೇಶಗಳ ಮೇಲಿನ ತನ್ನ ಹಿಡಿತವನ್ನು ತನ್ನ ಉಸಿ–ರಿರುವವರೆಗೂ ಕಾಯ್ದುಕೊಂಡು ಬಂದಳು. ಆಕೆಯ ಏಕಸ್ವಾಮ್ಯವನ್ನು ಮುರಿಯಲು ಹಲವಾರು ಬಾರಿ ಪೋರ್ಚುಗೀಸರು ಆಕೆಯ ಸಾಮ್ರಾಜ್ಯದ ಮೇಲೆ ಆಕ್ರಮಣ ಮಾಡಿದರೂ ಹಿಂಜರಿಯದೆ ಪ್ರತಿ ಬಾರಿಯೂ ಅವರನ್ನು ಹಿಮ್ಮೆಟ್ಟಿಸಿ ಕಳುಹಿಸಿದ ಚೌಟ ರಾಣಿ ಅಬ್ಬಕ್ಕದೇವಿ ತನ್ನ ನಿರಂತರ ಪ್ರಯತ್ನ ಶೀಲತೆಗೆ ಹಾಗೂ ಅಸಾಧಾರಣ ನಾಯಕತ್ವಕ್ಕೆ ಇತಿಹಾಸದಲ್ಲಿ ಸ್ಥಾನ ಗಳಿಸಿದ್ದಾಳೆ.

ರಾಣಿ ವೇಲು ನಾಚಿಯಾರ್.... ಆಕೆ ತನಗೆ ಸ್ವಾತಂತ್ರ ದೊರೆಯಲಿ ಎಂದು ಕಾಯಲಿಲ್ಲ, ಬದಲಾಗಿ ತನ್ನ ನಾಡಿನ ಸ್ವಾತಂತ್ರ್ಯಕ್ಕಾಗಿ ಆಕೆ ಉಗ್ರವಾಗಿ ಹೋರಾಡಿದಳು. 18ನೇ ಶತಮಾನದ ಆದಿ ಭಾಗದಲ್ಲಿ ಅತ್ಯಂತ ಹಳೆಯ ಶಿವಗಂಗೆ ಎಂಬ ರಾಜ ಮನೆತನದ ಒಡತಿಯಾಗಿ ಆಕೆ ತನ್ನ ಸೇನೆಯನ್ನು ಮುನ್ನಡೆಸಿದಳು ಮಾತ್ರವಲ್ಲ ಉದಯಲ್ ಪದೈ ಎಂಬ ಮಹಿಳೆಯರ ಒಂದು ಪಡೆಯನ್ನೇ ಆಕೆ ಕಟ್ಟಿದಳು. ತನ್ನ ನಾಡಿನ ಸುತ್ತಣ ಎಲ್ಲಾ ರಾಜ್ಯಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡು ಆಕೆ ಬ್ರಿಟಿಷ್ ಅರಸೊತ್ತಿಗೆಯ ಈಸ್ಟ್ ಇಂಡಿಂ–ಯಾ ಕಂಪನಿಯನ್ನು ಅತ್ಯಂತ ದಿಟ್ಟವಾಗಿ ಎದುರಿಸಿ ಇತಿಹಾಸ ನಿರ್ಮಿಸಿದಳು ಕಿತ್ತೂರು ರಾಣಿ ಚೆನ್ನಮ್ಮ.... ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಕಿತ್ತೂರು ಒಂದು ಪುಟ್ಟ ಸಂಸ್ಥಾನವಾಗಿದ್ದರೂ ಕೂಡ 'ನಮ್ಮ ನೆಲ ನಮ್ಮ ಹಕ್ಕು' ಎಂದು ಸಾಧಿಸಿ ಬ್ರಿಟಿಷರನ್ನು ಇನ್ನಿಲ್ಲದಂತೆ ಕಾಡಿದ ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ಬೆಳ್ಳಿಚುಕ್ಕಿ' ಎಂದು ಇತಿಹಾಸಕಾರರಿಂದ ಹೊಗಳಿಸಿಕೊಂಡ ಮಹಾನ್ ಕಲಿ ರಾಣಿ ಚೆನ್ನಮ್ಮ. ಪತಿಯ ಮರಣದ ನಂತರ ಸವತಿಯ ಮಗನನ್ನು ಚೆನ್ನಾಗಿ ಬೆಳೆಸಿ ಆತನನ್ನು ಪಟ್ಟಕ್ಕೆ ಏರಿಸಿದಳು. ಮುಂದೆ ಆತ ಅಕಾಲ ಮರಣಕ್ಕೆ ಈಡಾದಾಗ ಮಾಸ್ತಮರಡಿಯ ದೇಸಾಯಿಯವರ ಮಗನನ್ನು ದತ್ತಕ ಪುತ್ರನನ್ನಾಗಿ ಸ್ವೀಕರಿಸಿ ಯುವರಾಜ ಪಟ್ಟ ಕಟ್ಟಿದಳು. ಇದನ್ನು ಒಪ್ಪದ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ರಣ ಕಹಳೆಯನ್ನು ಊದಿ ಹೋರಾಡಿದ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ . ಝಾನ್ಸಿ ರಾಣಿ ಲಕ್ಷ್ಮೀಬಾಯಿ... ರಾಣಿಯಾಗಿ ಬದುಕಿದರೂ ಕೂಡ ಆಕೆ ಓರ್ವ ಯೋಧರಂತೆ ಮರಣವನ್ನು ಎದುರಿಸಿದಳು. ಕೇವಲ 19 ರ ಹರೆಯದ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ತನ್ನ ಬೆನ್ನ ಹಿಂದೆ ಪುಟ್ಟ ಮಗುವನ್ನು ಕಟ್ಟಿಕೊಂಡು ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಹೋರಾಡಿ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾಳೆ. 1850 ರಲ್ಲಿ ಆಕೆ ಬ್ರಿಟಿಷರೊಂದಿಗೆ ಹೋರಾಡಿ ಮಡಿಯುವ ಸಮಯದಲ್ಲಿ ಆಕೆ ಬಯಸಿದ್ದು ನಾನು ಬ್ರಿಟಿಷರ ಕೈ ಸೆರೆಯಾಗದ ನನ್ನ ಮಾತೃಭೂಮಿಯಲ್ಲಿ ಪ್ರಾಣ ಬಿಡಬೇಕು ಎಂದು.

ಜಲ್ಕಾರಿ ಬಾಯಿ... ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯ ಆಪ್ತಳಾಗಿದ್ದ ವೀರಯೋಧಳೇ ಜಲ್ಕಾರಿ ಬಾಯಿ. ರಾಣಿ ಲಕ್ಷ್ಮೀಬಾಯಿ ಹಾಗೂ ಆಕೆಯ ಪುಟ್ಟ ಮಗುವನ್ನು ರಕ್ಷಿಸುವ ಸಲುವಾಗಿ ಶತ್ರುಗಳ ಹಿಡಿತದಿಂದ ತಪ್ಪಿಸಿಕೊಳ್ಳುವ ಸಮಯದಲ್ಲಿ ತಾನು ರಾಣಿ ಲಕ್ಷ್ಮೀಬಾಯಿಯ ವೇಷದಲ್ಲಿ ಬ್ರಿಟಿಷರ ಕಣ್ಣಿಗೆ ಮಣ್ಣೆರಚಿದ ದಿಟ್ಟ ಮಹಿಳೆ. ಆಕೆಯ ಧೈರ್ಯ ಮತ್ತು ಸ್ಥೈರ್ಯಗಳೇ ರಾಣಿ ಲಕ್ಷ್ಮೀಬಾಯಿಗೆ ಮತ್ತೊಂದು ಅವಕಾಶವನ್ನು ಹಾಗೂ ಸ್ವತಃ ಆಕೆಗೆ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಒಂದು ಮಹತ್ತರ ಸ್ಥಾನವನ್ನು ಕಲ್ಪಿಸಿಕೊಟ್ಟಿತು.

ಉದಾದೇವಿ.... 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಓರ್ವ ದಲಿತ ಮಹಿಳೆ ಉದಾದೇವಿ. ಲಖನೌ ಪ್ರಾಂತದ ಹೊರ ಭಾಗದಲ್ಲಿ ಯುದ್ಧ ಭೂಮಿಯಲ್ಲಿ ಆಕೆ ಮರದ ಮೇಲೆ ಕುಳಿತು ಬಿಲ್ಲನ್ನು ಹಿಡಿದು ಹಲವಾರು ಶತ್ರುಗಳನ್ನು ಮರಣಕ್ಕೆ ಈಡು ಮಾಡಿದಳು. ಸಾಯುವ ಮುನ್ನ ನೂರಾರು ಶತ್ರುಗಳನ್ನು ಸಂಹ–ರಿಸಿದ ಖ್ಯಾತಿ ಆಕೆಯದು. ಆಕೆಯ ಧೈರ್ಯ ಹಾಗೂ ಶೌರ್ಯಗಳು ಇಂದಿಗೂ ಆಕೆಯನ್ನು ನೆನೆಯುವವರ ಮನದಲ್ಲಿ ಪ್ರತಿಧ್ವನಿಸುತ್ತದೆ.

ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್.... ಇಂಡಿಯನ್ ನ್ಯಾಷನಲ್ ಆರ್ಮಿಯ ಮಹಿಳಾಸೇನಾಧಿಕಾ–ರಿಯಾಗಿ ಕಾರ್ಯನಿರ್ವಹಿಸಿದ ಕ್ಯಾಪ್ಟನ್ ಲಕ್ಷ್ಮಿ ಅವರು ನೇತಾಜಿಯವರು ಕಂಡ ಭಾರತದ ಕನಸನ್ನು ನನಸಾಗಿಸುವ ಅದಮ್ಯ ಆಶಯವನ್ನು ಹೊಂದಿದ್ದರು. 1943ರಲ್ಲಿ ರಾಣಿ ಆಫ್ ಝಾನ್ಸಿ ರೆಜಿಮೆಂಟ್ ಎಂಬ ತುಕಡಿಯನ್ನು ಮುನ್ನಡೆಸುವ ನಾಯಕಿಯಾಗಿ ಆಕೆ ಕಾರ್ಯ ನಿರ್ವಹಿಸಿದ್ದರು.

ಇದೀಗ 21ನೇ ಶತಮಾನದಲ್ಲಿ ಆ ವೀರ ಮಹಿಳೆಯರ ಪರಂಪರೆಯನ್ನು ಮುಂದುವರಿಸಿ ಮತ್ತೆ ಮಹಿಳಾ ಯೋಧರು ಭಾರತೀಯ ಮಿಲಿಟರಿ ಪಡೆಯನ್ನು ಸೇರಿ ಕಠಿಣತೆ ಕಠಿಣ ತರಬೇತಿಗಳನ್ನು ಪಡೆದು ಯುದ್ಧ ರಂಗಗಳಲ್ಲಿ ಧುಮುಕಿ ತಮ್ಮ ಅಸ್ಮಿತೆಯನ್ನು ಸಾಬೀತುಪಡಿಸಿದ್ದಾರೆ. ಭಾರತೀಯ ಮಹಿಳೆಯರು ಅಡುಗೆ ಮನೆಯಲ್ಲಿ ಮಾತ್ರವಲ್ಲ ಆಕಾಶದೆತ್ತರಕ್ಕೆ ಚಿಮ್ಮಿ ಅಲ್ಲೂ ಕೂಡ ಅಸಾಧ್ಯವಾದುದನ್ನು ಸಾಧಿಸಬಲ್ಲ ಧೈರ್ಯ ಹಾಗೂ ನಂಬಿಕೆಯನ್ನು ಹೊಂದಿದ್ದಾರೆ ಎಂಬುದನ್ನು ಹಲವರು ಸಾಬೀತುಪಡಿಸಿದ್ದಾರೆ.

ಅವರಲ್ಲಿ ಗುಂಜನ್ ಸಕ್ಸೇನ ಕೂಡ ಒಬ್ಬರು ಗುಂಜನ್ ಸಕ್ಸೇನ.... 1999 ರಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಹೆಲಿಕಾಪ್ಟರ್ ಹಾರಿಸಿ ತಮ್ಮ ಸೇನೆಯವರಿಗೆ ಆಹಾರ, ನೀರು, ತುರ್ತು ವೈದ್ಯಕೀಯ ಕರೆಗಳಿಗೆ ಓಗೊಟ್ಟು ಅವರನ್ನು ರಕ್ಷಿಸುವಲ್ಲಿ ತನ್ನ ಅಸಾಧಾರಣ ಧೈರ್ಯ ಶೌರ್ಯಗಳನ್ನು ಮೆರೆದ ಗುಂಜನ್ ಸಕ್ಸೇನಾ ಭಾರತದ ಮೊದಲ ಮಹಿಳಾ ಪೈಲೆಟ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸ್ನೇಹಿತರೆ... ಹೆಣ್ಣು ಮಕ್ಕಳು ಕೇವಲ ಪ್ರೀತಿ ವಾತ್ಸಲ್ಯ ಮಮತೆ ಕರ್ತವ್ಯ ಪ್ರಜ್ಞೆಗೆ ಮಾತ್ರವಲ್ಲ ಧೈರ್ಯ ಶೌರ್ಯ ಸಾಹಸಗಳಿಗೆ ಕೂಡ ಹೆಸರಾದವರು. ರೊಟ್ಟಿ ತಟ್ಟುವ ಕೈ ಸಮಯ ಬಂದಾಗ ಖಡ್ಗವನ್ನು ಹಿಡಿಯಬಲ್ಲದು, ವಿಮಾನವನ್ನು ಚಲಾಯಿಸಬಲ್ಲದು ಎಂಬುದಕ್ಕೆ ಮಹಿಳೆಯರೇ ಸಾಕ್ಷಿ. ಇಂತಹ ಎಲ್ಲ ಮಹಿಳಾ ಶಕ್ತಿಗೆ ಕೋಟಿ ನಮನಗಳು



ವೀಣಾ ಹೇಮಂತ್ ಗೌಡ ಪಾಟೀಲ್

## ಶಿಗ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 1000 ಉಚಿತ ನೋಟ್‌ಬುಕ್‌ಗಳ ವಿತರಣೆ



ಲಕ್ಷ್ಮೇಶ್ವರ :ತಾಲೂಕಿನ ಶಿಗ್ಲಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ವಿಧ್ಯಾರ್ಥಿಗಳಿಗೆ ಮಾರುತಿ ಮೆಡಿಕಲ್ ಬೆಂಗಳೂರು ಇವರ ಕಡೆಯಿಂದ ಉಚಿತವಾಗಿ 1000 ನೋಟ್ ಬುಕ್ ಗಳನ್ನು ನೀಡಲಾಯಿತು.

ಅಧ್ಯಕ್ಷತೆವಹಿಸಿದ್ದ ಮುಖ್ಯ ಶಿಕ್ಷಕ ಬಿ. ಕೆ ಹತ್ತಿಕಾಳ ಮಾತನಾಡಿ, ವಿಧ್ಯಾರ್ಥಿಗಳ ಶೈಕ್ಷಣಿಕ ಅಭಿವೃದಿಗೆ ಸಹಾಯ ಮಾಡುವ ಇಂತಹ ಕಾರ್ಯ ಎಲ್ಲರಿಗೂ ಮಾದರಿ, ಸರಕಾರಿ ಶಾಲೆಗಳನ್ನ ಗುರುತಿಸಿ ಇಂತಹ ಸಮಾಜಮುಖಿ ಕಾರ್ಯ ಶ್ಲಾಘನೀಯ. ಸರಕಾರಿ ಶಾಲೆಯಲ್ಲಿಯೂ ಉತ್ತಮ ಶಿಕ್ಷಕ-ರಿಂದ ಉತ್ತಮ ಬೋಧನೆ ಕ್ರೀಡಾ ಚಟುವಟಿಕೆ ಮೂಲಕ ಮಕ್ಕಳಿಗೆ ಕಲಿಕಾ ವಾತಾವರಣವಿದ್ದು, ಸರಕಾರಿ ಶಾಲೆಗೆ ಪ್ರವೇಶ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಸುರೇಶ ಕುಲಕರ್ಣಿ. ರಾಜಾಸಾಬ ಸುಂಕದ ಇದ್ದರು.ತಿಪ್ಪಾನಾಯಕ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್ ಬಿ ಅಣ್ಣಿಗೇರಿ ಸ್ವಾಗತಿಸಿದರು. ಆರ್ ಡಿ ಕಲೆಯಗಾರ ಸ್ವಾಗತಿಸಿದರು.ದೀಪಾ ಭಸ್ಮೆ ನಿರೂಪಿಸಿದರು.

## ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮ

ಗದಗ: ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ , ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ( ರಿ), ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ,ಗದಗ ಹಾಗೂ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮವನ್ನು ಜೂನ್ 12 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ದಿವಾಣಿ ನ್ಯಾಯಾಧೀಶರಾದ ಸಿ.ಎಸ್.ಶಿವನಗೌಡ್ರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ರೋಹನ್ ಜಗದೀಶ್ , ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಶ್ರೀಮತಿ ಜಯದೇವಿ ಅಂದಪ್ಪ ಕವಲೂರು, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಶ್ರೀಶೈಲ ಸೋಮನಕಟ್ಟಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಡಾ. ನಂದಾ ಹಣಬರಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧಾ ಮಣ್ಣೂರ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಉಪನಿರ್ದೇಶಕರಾದ ಆರ್.ಎಸ್.ಬುರುಡಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮೆಹಬೂಬ ತುಂಬರಮಟ್ಟಿ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಬಿ.ಮಸನಾಯಿಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಶ್ರೀಮತಿ ಜಯಶ್ರೀ ಆರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಆರ್.ಜಿ. ಕಲ್ಲೂರ ಅವರುಗಳು ಆಗಮಿಸುವರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಾಯಕ ಕಾನೂನು ಅಭಿರಕ್ಷಕರಾದ ಗುರುರಾಜ ಗೌರಿ ಅವರು ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಉಪನ್ಯಾಸ ನೀಡಲಿದ್ದಾರೆ. ಕಾರ್ಮಿಕ ಇಲಾಖೆಯ ನಿರೀಕ್ಷಕರುಗಳಾದ ಉಮೇಶ ಎಸ್ ಹುಲ್ಲಣ್ಣವರ, ಕುಮಾರಿ ಸುಷ್ಮಾ , ಜಿಲ್ಲಾ ಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಸಂದೇಶ ಚ ಪಾಟೀಲ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಶಾಸಕ ಎಚ್.ಕೆ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಸ್ಪ್ರೇ ಪೇಂಟರ್ ಸಂಘ ಮನವಿ




ಗದಗ: ರಾಜ್ಯದ ಒಳ್ಳೆಯ ನೇತಾರರಲ್ಲಿ ಒಬ್ಬರಾದ ಎಚ್ ಕೆ ಪಾಟೀಲ ಅವರು ಸ್ಪ್ರೇ ಪೇಂಟರ್ ಸಂಘಕ್ಕೆ ಸಹಕಾರ ನೀಡಿದ್ದಾರೆ. ಕೊರೊನಾ ಸಂದರ್ಭದಲ್ಲಿ ಒಳ್ಳೆಯ ಸಹಕಾರ ನೀಡಿದ ನಾಯಕರಾಗಿದ್ದಾರೆ. ರೈತರ, ಕಾರ್ಮಿಕರ ಬಗ್ಗೆ ಅಪಾರ ಕಾಳಜಿ ಇದ್ದವರು, ಪ್ರಾಮಾಣಿಕ ಸೇವೆ ಸಲ್ಲಿಸುವ ಮನೋಭಾವ ಹೊಂದಿದ ಇಂತಹ ನಾಯಕರಿಗೆ ಸಚಿವ ಸ್ಥಾನ ನೀಡಬೇಕು ಎಂಬುದು ನಮ್ಮ ಒತ್ತಾಯ ಎಂದು ಜಿಲ್ಲಾ ಸ್ಪ್ರೇ ಪೇಂಟರ್ ಸಂಘದ ಅಧ್ಯಕ್ಷ ರಿಯಾಜ ಹೆಸರೂರ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಮುಂಬರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಎಚ್ ಕೆ ಪಾಟೀಲ ಅವರಿಗೆ ಸಚಿವ ಸ್ಥಾನ ಒದಗಿಸದೇ ಹೋದಲ್ಲಿ ಪ್ರತಿಭಟನೆ ತೀವ್ರ ಗೊಳಿಸುವುದಾಗಿ ತಿಳಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲೆಯ ಸ್ಪ್ರೇ ಪೇಂಟ-ರ್ ಸಂಘದ ಪದಾಧಿಕಾರಿಗಳಾದ ವಿರೇಶ ಗುಂಜಾಳ, ಗೋಪಾಲಸಿಂಗ್ ರಜಪೂತ, ದಾವಲಸಾಬ ಮಕರಬ್ಬಿ, ಮಾರುತಿ ಕಾತರಕಿ, ದಾದಾಪೀರ ಕಟ್ಟಿಮನಿ, ಅಕ್ರಂ ಕುಂದಗೋಳ, ಸಲ್ಮಾನ್ ಬಬರ್ಚಿ, ಮಹಮ್ಮದರಫೀಕ ಅಕ್ಕಿ, ಶರಣಪ್ಪ ಸೊರಟೂರ, ಇಬ್ರಾಹಿಂ ಇರಕಲ್ಲ, ರಸೂಲಸಾಬ ತಹಶೀಲ್ದಾರ ಸೇರಿದಂತೆ ಇತರರಿದ್ದರು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಅಂಗನವಾಡಿ, ಮಕ್ಕಳ ವ್ಯಕ್ತಿತ್ವದ ವಿಕಸನದ ಮೊದಲ ಮೆಟ್ಟಿಲು : ಸಿಡಿಪಿಓ ವೆಂಕಪ್ಪ



ನರಗುಂದ: ಅಂಗನವಾಡಿ ಕೇಂದ್ರಗಳು ಮಕ್ಕಳ ವ್ಯಕ್ತಿತ್ವ ವಿಕಸನದ ಮೊದಲ ಮೆಟ್ಟಿಲುಗಳಾಗಿದ್ದು, ಉತ್ತಮವಾದ ಭವಿಷ್ಯ ರೂಪಿಸುವಲ್ಲಿ ಇವುಗಳ ಪಾತ್ರ ಅತ್ಯಂತ ಹಿರಿದಾದುದು ಎಂದು ಸಿಡಿಪಿಓ ವೆಂಕಪ್ಪ ಗಿರಿತಿಮ್ಮನವರ ಹೇಳಿದರು.

ತಾಲೂಕಿನ ಕಪ್ಪಲಿ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ-66ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ, ಬಾಲ ವಿಕಾಸ ಸಮಿತಿ ಆಶ್ರಯದಲ್ಲಿ ಆರಂಭಿಸಿರುವ ಸರ್ಕಾರಿ ಮಾಂಟೆಸ್ಸರಿ ಸ್ಕೂಲ್ (ಎಲ್‌ಕೆಜಿ, ಯುಕೆಜಿ) ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು. ಹಿಂದಿನ ಕಾಲಕ್ಕೂ ಇಂದಿನ ಕಾಲಘಟಕ್ಕೂ ಮಕ್ಕಳ ಕಲಿಕಾ ವಿಧಾನದಲ್ಲಿ ಸಾಕಷ್ಟು ಬದಲಾವಣೆ ಕಾಣಬಹುದಾಗಿದೆ. ಆಧುನಿಕತೆಗೆ ತಕ್ಕಂತೆ ಶಿಕ್ಷಣ ವ್ಯವಸ್ಥೆ ಬಳಕೆಯಾಗಬೇಕಿದೆ. ಪುಟಾಣಿಗಳ ಕಲಿಕೆಯನ್ನು ಉತ್ತೇಜಿಸಲು ಶಾಲೆಗಳಲ್ಲಿ ಆಕರ್ಷಣೀಯ ಸುಂದರ ವಾತಾವರಣ ಸೃಷ್ಠಿಸುವ ಅಗತ್ಯತೆ ಎದುರಾಗಿದೆ. ಮಕ್ಕಳು ಕಷ್ಟಪಟ್ಟು ಕಲಿಯುವುದಕ್ಕಿಂತ ಇಷ್ಟಪಟ್ಟು ಕಲಿಯುವಂತೆ ಶಿಕ್ಷಕರು ಪ್ರೇರೇಪಿಸಬೇಕು.

ಶಿಕ್ಷಣವನ್ನು ಅತ್ಯಂತ ಪರಿಣಾಮಕಾ-ರಿಯಾಗಿಸುವ ನಿಟ್ಟಿನಲ್ಲಿ ಪೂರಕ ಪರಿಕರಗಳ ಬಳಕೆ ಸಹಕಾರಿಯಾಗಲಿದೆ. ಅಂಗನವಾಡಿಯಲ್ಲಿ ಎಲ್.ಕೆ.ಜಿ, ಯುಕೆಜಿ ಆರಂಭಿಸಿರುವ ಸರ್ಕಾರದ ಆಲೋಚನೆ, ಪ್ರಯೋಗ ಸ್ವಾಗತಾರ್ಹ. ಅಂಗನವಾಡಿ ಮಕ್ಕಳಿಗೆ ಪೌಷ್ಠಿಕ ಆಹಾರ, ಆರೋಗ್ಯ, ಉಚಿತ ಶಿಕ್ಷಣ ನೀಡಲಾಗುತ್ತಿದೆ. ಗರ್ಭಿಣಿ, ಬಾಣಂತಿಯರಿಗೆ ಆರೋಗ್ಯ ತಪಾಸಣೆ, ಧನ ಸಹಾಯ ಯೋಜನೆಗಳಾದ ಪ್ರಧಾನಮಂತ್ರಿ ಮಾತೃ ವಂದನಾ, ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಸೇರಿದಂತೆ ಹಲವು ಪ್ರಯೋಜನಕಾರಿ ಕಾರ್ಯಕ್ರಮಗಳ ಜೊತೆಗೆ ಮಾಂಟೆಸ್ಸರಿ ಸ್ಕೂಲ್ ಆರಂಭವು ಮಕ್ಕಳಿಗೆ ಪ್ರಯೋಜನಕಾರಿ ಆಗುತ್ತದೆ ಎಂದು ತಿಳಿಸಿದರು. ಪೋಷಣ ಅಭಿಯಾನ ಸಂಯೋಜ-ಕ ಮಂಜುನಾಥ ಗುಗ್ಗರಿ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಎಲ್.ಕೆ,ಜಿ, ಯು,ಕೆ,ಜಿ ಆರಂಭವು ಮಕ್ಕಳಲ್ಲಿ ನವಚೈತನ್ಯ ಮೂಡಿಸುವಂತಿದೆ. ಮಕ್ಕಳಿಗೆ ಶಿಸ್ತು ಮೂಡಿಸುವ ಸಮವಸ್ತ್ರ, ಕಲಿಕಾ ಪುಸ್ತಕ, ವಾಟರ್ ಬಾಟಲಿ, ಸ್ಕೂಲ್ ಬ್ಯಾಗ್‌ಗಳ ವಿತರಣೆ ಜತೆಗೆ ಎಲ್‌ಇಡಿ ಟಿವಿಗಳ ಮುಖೇನ ಮಕ್ಕಳಿಗೆ ಮನರಂಜನೆ, ಶಿಕ್ಷಣ ನೀಡುತ್ತಿರುವುದು ವಿಶಿಷ್ಟವಾಗಿದೆ. ಎಲ್‌ಕೆಜಿ, ಯುಕೆಜಿ ತರಗತಿಗಳ ಪ್ರಾರಂಭದಿಂದ ಅಂಗನವಾಡಿಗಳ ಬಲವರ್ಧನೆಗೆ ಅತ್ಯಂತ ಸಹಕಾರಿಯಾಗಿದೆ ಎಂದು ತಿಳಿಸಿದರು.

ಬಾಲವಿಕಾಸ ಸಮಿತಿ ಅಧ್ಯಕ್ಷೆ ಸುಕನ್ಯಾ ದ್ಯಾವನಗೌಡ್ರ ಸರಸ್ವತಿ ಪೂಜೆ ನೆರವೇರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಮಲ್ಲವ್ವ ಗಿರಿಯಪ್ಪಗೌಡ್ರ ಮಕ್ಕಳಿಗೆ ಸ್ಕೂಲ್ ಬ್ಯಾಗ್, ಸಮವಸ್ತ್ರ ಹಾಗೂ ಕುಡಿಯುವ ನೀರಿನ ಬಾಟಲಿ ದೇಣಿಗೆ ನೀಡಿದ ಹಿನ್ನೆಲೆಯಲ್ಲಿ ಶಿಶು ಅಭಿವೃದ್ಧಿ ಇಲಾಖೆ ವತಿಯಿಂದ ಕಾರ್ಯಕ್ರಮದಲ್ಲಿ ಅವರನ್ನು ಸನ್ಮಾನಿಸಲಾಯಿತು. ಗೊಡಚಪ್ಪ ಬಡಿಗೇರ, ವೀರಣ್ಣ ಚಿಂದಿ, ಸುಮಿತ್ರಾ ಸಿಸ್ಟರ್, ಶಾಂತಲಾ ಅಂಕಲಿಮಠ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಅವಶ್ಯಕವಿರುವ ವಿವಿಧ ಪಿಠೋಪಕರಣಗಳಿಗೆ ಧನ ಸಹಾಯ ನೀಡಿದರು. ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಸದಸ್ಯರಾದ ಗೊಡಚಪ್ಪ ಚಿಂದಿ, ಸಾವಿತ್ರೆವ್ವ ಕಲಾರಿ, ಆರೋಗ್ಯ ಇಲಾಖೆಯ ಸೀಮಾ ತೆಗ್ಗಿ, ಅಂಗನವಾಡಿ ಮೇಲ್ವಿಚಾರಕಿ ಪರಿಮಳಾ ಹೂಗಾರ ಹಾಗೂ ವಿವಿಧ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ, ಸಹಾಯಕಿಯರು, ಗ್ರಾಮಸ್ಥರು, ತಾಯಂದಿರು, ಮಕ್ಕಳು ಉಪಸ್ಥಿತರಿದ್ದರು.

# ಭುವನೇಶ್ವರಿ ವಿಶೇಷ ಶಾಲೆಯಲ್ಲಿ ಉಚಿತ ಫಿಜಿಯೋಥೆರಪಿ ಚಿಕಿತ್ಸೆ



ಗದಗ: ವಿಶ್ವ ಕಲ್ಯಾಣ, ಭಾರತೀಯ ರೆಡ್ ಕ್ರಾಸ್ ಹಾಗೂ ಡಿಡಿಆರ್‌ಸಿ ಸಹಯೋಗದಲ್ಲಿ ವಿಶ್ವ ಕಲ್ಯಾಣ ಸಂಚಾಲಿತ ಭುವನೇಶ್ವರಿ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯಲ್ಲಿ ಯಶಸ್ವಿಯಾಗಿ ಉಚಿತ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ ಜರುಗಿತು.

ಫಿಜಿಯೋಥೆರಪಿ ತಜ್ಞ ಡಾ. ಸಾಯಿಪ್ರಕಾಶ ಯರಗೇರಿ ಮಾತನಾಡಿ, ವಿಶೇಷ ಚೇತನರ ಕ್ಷೇತ್ರದಲ್ಲಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗಳಿಗೂ ಎಲ್ಲ ಸೌಲಭ್ಯಗಳು ಸಿಗುವಂತಾಗಬೇಕು ಯಾರು ಕೂಡಾ ಸೌಲಭ್ಯ ವಂಚಿತರಾಗಬಾರದು. ವಿಶ್ವ ಕಲ್ಯಾಣ ಸಂಸ್ಥೆಯು ವಿಶೇಷ ಚೇತನರಿಗೆ ನಿಸ್ವಾರ್ಥವಾಗಿ ಸೇವೆ ಮಾಡುತ್ತಿರುವುದು ಶ್ಲಾಘನೀಯ. ಈ ನಿಸ್ವಾರ್ಥ ಸೇವೆಗೆ ನಾವೂ ಕೂಡ ಕೈ ಜೊಡಿಸಿ, ದಿವ್ಯಾಂಗರನ್ನು ಮುಖ್ಯವಾಹಿನಿಗೆ ಸೇರಿಸಲು ನಾವು ಸದಾ ಸಿದ್ಧರಿದ್ದೇವೆ. ಇಂದು ಉಚಿತ ಫಿಜಿಯೋಥೆ-ರಪಿ ಚಿಕಿತ್ಸಾ ಶಿಬಿರವನ್ನು ಭಾರತೀಯ ರೆಡ್ ಕ್ರಾಸ್ & ಡಿಡಿಆರ್‌ಸಿ ಸಹಯೋಗದೊಂದಿಗೆ ಮಾಡುತ್ತಿದ್ದೇವೆ, ಇದರ ಸದುಪಯೋಗವನ್ನು ಪಡೆದುಕೊಳ್ಳಿ, ಇವರಿಗೆ ಅನುಕಂಪ ತೋ-ರಿಸದೇ, ಅವಕಾಶವನ್ನು ಕಲ್ಪಿಸುವುದರ ಮೂಲಕ ಸಮಾಜದಲ್ಲಿ ಬದುಕಲು ಅವಕಾಶ ಮಾಡಿಕೊಡೋಣವೆಂದು ಹೇಳಿದರು. ಎಲ್ಲ ವಿಶೇಷ ಮಕ್ಕಳಿಗೆ ವ್ಯಕ್ತಿಗತವಾಗಿ ಫಿಜಿಯೋಥೆ-ರಪಿಯನ್ನು ಮಾಡಿಸಿ, ಅವರವರ ವೈಯಕ್ತಿಕ ಪೈಲ್‌ನಲ್ಲಿ ಹೇಗೆ ಫಿಜಿಯೋಥೆರಪಿಯನ್ನು ಮಾಡಿಸಬೇಕೆಂದು ವಿವರವಾಗಿ ಬರೆದು ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಿ, 15 ದಿನಕೊಮ್ಮ ಬಂದು ಮುಂದಿನ ಹಂತಗಳನ್ನು ಮಾಡಿಸಿ ತೋರಿಸುತ್ತೇವೆಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಮಂಜುನಾಥ ಹದ್ದಣ್ಣವರವರು ಮಾತನಾಡಿ, ಸಮಾಜದಲ್ಲಿರುವ ದಿವ್ಯಾಂಗರನ್ನು ಮುಖ್ಯವಾಹಿಗೆ ತರಲು ಪ್ರತಿಯೊಬ್ಬರ ಸಹಾಯ-ಸಹಕಾರ ಅತೀ ಅವಶ್ಯಕತೆ ಇದೆ. ಇಂದು ಈ ಸೇವಾ ಕಾರ್ಯವನ್ನು ಬೆಂಬಲಿಸಿ, ಉಚಿತ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರವನ್ನು ಮಾಡುವುದರ ಮೂಲಕ ನಮ್ಮ ಜೊತೆ ಕೈ ಜೊಡಿಸುತ್ತಿರುವುದು ನಮ್ಮ ಸೌಭಾಗ್ಯವೆಂದು ಹೇಳಿದರು. ಕಾರ್ಯಕ್ರಮದಲ್ಲಿ ಶಂಕರಗೌಡ ಪಾಟೀಲ, ಶೇಖರ ಇಟಗಿ, ಶಾಂತಮ್ಮಾ ಹೂಗಾರ, ಸಿದ್ಧಲಿಂಗೇಶ ಕಲ್ಲೂರ, ವಿಶೇಷ ಚೇತನರು, ಸಿಬ್ಬಂದಿ ವರ್ಗ ಹಾಗೂ ಪಾಲಕರು ಉಪಸ್ಥಿತರಿದ್ದರು.

### ಎಸ್.ಐ.ಆರ್ ಕುರಿತು ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ ಮಾಹಿತಿ

# ಜೂನ್ 30 ರಿಂದ ಜುಲೈ 29 ವರೆಗೆ ಬಿ.ಎಲ್.ಓಗಳಿಂದ ಮನೆ-ಮನೆ ಗಣತಿ ಗದಗಜಿಲ್ಲೆಯಲ್ಲಿ ಶೇ.94.14ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣ



ಗದಗ: ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಶೇ.94.14 ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಳಿಸಲಾಗಿದೆ. ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ ತಿಳಿಸಿದರು.

ಗದಗ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಎಸ್ ಐ ಆರ್ ಕು-ರಿತು ಪತ್ರಿಕಾಗೋಷ್ಠಿ ನಡೆಸಿ ಅವರು ಮಾಹಿತಿ ನೀಡಿದರು. ಎಸ್.ಐ.ಆರ್ ಕುರಿತು ರಾಜ್ಯದಾದ್ಯಂತ ಸಾಕಷ್ಟು ಚರ್ಚೆಗಳು ನಡೆದಿವೆ. ಸಾರ್ವಜನಿಕರಲ್ಲಿ ಉಂಟಾಗಿರುವ ಗೊಂದಲಗಳನ್ನು ನಿವಾ-ರಿಸಲು ಪಾರದರ್ಶಕವಾಗಿ ಎಸ್.ಐ.ಆರ್ ಪ್ರಕ್ರಿಯೆ ನಡೆಲಾಗುವುದು. ಅರ್ಹ ಯಾವೊಬ್ಬ ಮತದಾರನೂ ಪಟ್ಟಿಯಿಂದ ಹೊರಗುಳಿಯಬಾರದು, ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎಂದು ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ್ ಹೇಳಿದರು. ಕಳೆದ ಆರು ತಿಂಗಳಿಂದ ಎಸ್.ಐ.ಆರ್ ಅಂಗವಾಗಿ ನಿರಂತರವಾಗಿ ಸಿದ್ಧತೆ ನಡೆಸಲಾಗಿದೆ. ಆಯೋಗದ ಮಾರ್ಗಸೂಚಿಯಂತೆ 2002ರ ಮತದಾರರ ಪಟ್ಟಿಯನ್ನು ಮಾನದಂಡವಾಗಿಟ್ಟುಕೊಂಡು, ಪ್ರಸ್ತುತ ಇರುವ 2025ರ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಹಾಗೂ ಮ್ಯಾಪಿಂಗ್ ಪ್ರಕ್ರಿಯೆ ನಡೆಸಲಾಗಿದೆ. ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಜಿಲ್ಲೆಯಲ್ಲಿ ಈಗಾಗಲೇ ಶೇ 94.14 ರಷ್ಟು ನೈಜ ಮತದಾರರನ್ನು ಗುರುತಿಸಿ, ಕುಟುಂಬಗಳ ಲಿಂಕೇಜ್‌ನೊಂದಿಗೆ ಹೊಂದಾಣಿಕೆ ಮಾಡಲಾಗಿದೆ ಎಂದರು.

ವಿಶೇಷ ಪರಿಷ್ಕರಣೆ ಅಂಗವಾಗಿ ಜೂನ್ 20 ರಿಂದ 29ರವರೆಗೆ ಪೂರ್ವಸಿದ್ಧತೆ, ತರಬೇತಿ ಮತ್ತು ಮುದ್ರಣ ಕಾರ್ಯಗಳು ನಡೆಯಲಿವೆ. ಜೂನ್ 30 ರಿಂದ ಜುಲೈ 29 ರವರೆಗೆ ಬಿ.ಎಲ್.ಒ.ಗಳು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಹಾಗೂ ಪರಿಶೀಲನೆ ನಡೆಸಲಿದ್ದಾರೆ. ತದನಂತರ ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾಧ್ಯಮಗಳು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಕೋರಿದರು. 53004

**ಮತದಾರರ ಪತ್ತೆಗಾಗಿ ವಿಶೇಷ ಕಾರ್ಯಾಚರಣೆ:**

2025ರ ಜಿಲ್ಲೆಯ ಮತದಾರರ ಪಟ್ಟಿಯ ಪ್ರಕಾರ ಒಟ್ಟು 9,04,994 ಅರ್ಹ ಮತದಾರರಿದ್ದು, ಈ ಪೈಕಿ ಈಗಾಗಲೇ 8,51,991 ಮತದಾರರನ್ನು ಗುರುತಿಸಿ ಮ್ಯಾಪಿಂಗ್ ಮಾಡಲಾಗಿದೆ. ಇದರಲ್ಲಿ ಕೆಲವರು ಮೃತರಾಗಿರಬಹುದು, ಬೇರೆ ಕಡೆಗೆ ಕಾಯಂ ಆಗಿ ವಲಸೆ ಹೋಗಿರಬಹುದು, ಅಥ-ವಾ ಮತಪಟ್ಟಿಯಲ್ಲಿ ಎರಡು ಬಾರಿ ಹೆಸರು ಸೇರ್ಪಡೆಯಾಗಿರಬಹುದು. ಆದರೆ, ಯಾರನ್ನೂ ಏಕಾಏಕಿ ಪಟ್ಟಿಯಿಂದ ಕೈಬಿಡಲಾಗುವುದಿಲ್ಲ. ಪತ್ತೆಯಾಗದ ಈ 53004 ಮತದಾರರಿಗೆ ನೋಟಿಸ್ ನೀಡಿ ಪರಿಶೀಲಿಸಲಾಗುವುದು. ಮೃತ ಪಟ್ಟ ಬಗ್ಗೆ ಅಧಿಕೃತ ಮರಣ ಪ್ರಮಾಣಪತ್ರ ಸಿಗುವವರೆಗೂ ಯಾರ ಹೆಸರನ್ನೂ ಪಟ್ಟಿಯಿಂದ ತೆಗೆದುಹಾಕುವುದಿಲ್ಲ. ಮತದಾರರ ಪತ್ತೆಗಾಗಿ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು ಎಂದರು.

**ಮನೆ ಗಣತಿ ಸಹಕಾರಕ್ಕೆ ಕೋರಿಕೆ:**

ಈಗಾಗಲೇ ಮನೆ ಮನೆ ಸಮೀಕ್ಷೆ ಮುಗಿದಿದ್ದು, ಮುಂದಿನ ಹಂತವಾಗಿ ಪ್ರತಿಯೊಬ್ಬ ಮತದಾರರ ಮನೆ ಬಾಗಿಲಿಗೆ ಬಿಎಲ್‌ಒಗಳ ಮೂಲಕ ಅರ್ಧದಷ್ಟು ಮಾಹಿತಿ ಭರ್ತಿಯಾಗಿರುವ ಗಣತಿ ನಮೂನೆ ತಲುಪಿಸಲಾಗುವುದು. ಇದರಲ್ಲಿ ಮತದಾರರ ಹೆಸರು, ಎಪಿಕ್ ಸಂಖ್ಯೆ, ಸಂಬಂಧಿಕರ ಹೆಸರು ಹಾಗೂ ವಿಧಾನಸಭಾ ಕ್ಷೇತ್ರದ ವಿವರಗಳು ಇರಲಿವೆ. ಬಿಎಲ್‌ಒಗಳು ಮನೆಗಳಿಗೆ ಕನಿಷ್ಠ ಮೂರು ಬಾರಿ ಭೇಟಿ ನೀಡಿ, ಗಣತಿ ನಮೂನೆಗಳನ್ನು ತಲುಪಿಸಲು ಪ್ರಯತ್ನಿಸಲಿದ್ದಾರೆ. ನಂತರ ವಿವರಗಳು ಸರಿಯಾಗಿವೆಯೇ ಎಂಬುದನ್ನು ಮತದಾರರಿಂದ ದೃಢೀಕರಿಸಿಕೊಂಡು ಸಹಿ ಪಡೆದು ವಾಪಸ್ ತರಲಿದ್ದಾರೆ. ಸಾರ್ವಜನಿಕರು ಗಣತಿ ನಮೂನೆ ಸ್ವೀಕರಿಸಿ, ಪರಿಶೀಲಿಸಿ ಕಡ್ಡಾಯವಾಗಿ ಬಿಎಲ್‌ಒಗಳಿಗೆ ವಾಪಸ್ ನೀಡಬೇಕು. ಇಲ್ಲದಿದ್ದರೆ ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟು ಹೋಗುವ ಸಾಧ್ಯತೆ ಇರುತ್ತದೆ. ರಾಜಕೀಯ ಪಕ್ಷಗಳು ಈ ಬೃಹತ್ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ ಕೋರಿದರು.

**ಅಗತ್ಯ ದಾಖಲೆ ಪಡೆದು ಮತಪಟ್ಟಿಗೆ ಸೇರ್ಪಡೆ:**

ಕುಟುಂಬದ ಮುಖ್ಯಸ್ಥರ ಹೆಸರು 2002ರ ಮತದಾರರ ಪಟ್ಟಿಯಲ್ಲಿದ್ದರೆ, ಹೊಸದಾಗಿ ಅರ್ಹತೆ ಪಡೆಯುವ ಕುಟುಂಬದ ಇತರೆ ಸದಸ್ಯರ ಹೆಸರನ್ನು ಸೇರ್ಪಡೆ ಮಾಡುವುದು ಸುಲಭವಾಗುತ್ತದೆ. ಮದುವೆಯಾಗಿ ಅಥವಾ ವಲಸೆ ಬಂದು ಇಲ್ಲಿ ನೆಲೆಸಿರುವವರ ಹೆಸರು ಹಳೆಯ ವೋಟರ್ ಲಿಸ್ಟ್‌ನಲ್ಲಿ ಇಲ್ಲದಿದ್ದರೆ, ಅವರಿಗೆ ಫ್ಯಾಮಿಲಿ ಲಿಂಕೇಜ್ ಸಿಗುವುದಿಲ್ಲ. ಈ ಹಿಂದೆ ಅವರು ವಾಸವಾಗಿದ್ದ ಸ್ಥಳದಲ್ಲಿನ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇದ್ದರೆ, ಆ ಮಾಹಿತಿ ಅನುಸಾರ ಹೆಸರು ಸೇರ್ಪಡೆ ಮಾಡಬಹುದು. ಮ್ಯಾಪಿಂಗ್ ಆಗದೆ ಇರುವವರು ಮನೆ ಗಣತಿ ಫಾರಂ ಜೊತೆ ಚುನಾವಣಾ ಆಯೋಗ ನಿಗದಿಪಡಿಸಿದ ಕೇಂದ್ರ ಅಥವಾ ರಾಜ್ಯ ಸರ್ಕಾರ, ಸಾರ್ವಜನಿಕ ಉದ್ಯಮಗಳು ನಿಯಮಿತ ಉದ್ಯೋಗಿ ಗುರುತಿನ ಚೀಟಿ, ಪಿಂಚಣಿ ಆದೇಶ ಅಥವಾ ಗುರುತಿನ ಚೀಟಿ, 1 ಜುಲೈ 1987ಕ್ಕಿಂತ ಮೊದಲು ಭಾರತದಲ್ಲಿ ಸರ್ಕಾರಿ, ಸ್ಥಳೀಯ ಪ್ರಾಧಿಕಾರ, ಬ್ಯಾಂಕ್,ಅಂಚೆ ಕಚೇರಿ, ಎಲ್.ಐ.ಸಿ ಉದ್ಯಮಗಳಿಂದ ನೀಡಲಾದ ಯಾವುದೇ ಗುರುತಿನ ಚೀಟಿ, ಪ್ರಮಾಣ ಪತ್ರ ಅಥವಾ ದಾಖಲೆ, ಜನನ ಪ್ರಮಾಣ ಪತ್ರ, ಪಾಸ್‌ಪೋರ್ಟ್, ಮೆಟ್ರಿಕ್ಯೂಲೇಶನ್ (ಎಸ್.ಎಸ್.ಎಲ್.ಸಿ) ಶೈಕ್ಷಣಿಕ ಪ್ರಮಾಣ ಪತ್ರ, ಶಾಶ್ವತ ನಿವಾಸ ಪ್ರಮಾಣ ಪತ್ರ, ಅರಣ್ಯ ಹಕ್ಕು ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ರಾಷ್ಟ್ರೀಯ ನಾಗರಿಕರ ನೋಂದಣಿ, ಕುಟುಂಬ ನೊಂದಣಿ, ಭೂಮಿ ಮನೆ ಹಂಚಿಕೆ ಪ್ರಮಾಣ ಪತ್ರ ಸಲ್ಲಿಸಬಹುದು. ಇದರೊಂದಿಗೆ ಆಧಾರ್ ಕಾರ್ಡನ್ನು ಗುರುತಿನ ಪುರಾವೆಯಾಗಿ ಮಾತ್ರ ನೀಡಬಹುದು. ಇವುಗಳನ್ನು ಪಡೆದು ಮತಪಟ್ಟಿಗೆ ಸೇರಿಸಲು ಕ್ರಮ ವಹಿಸಲಾಗುವುದು.

**ಅಕ್ಟೋಬರ್ 7 ರಂದು ಅಂತಿಮ ಮತಪಟ್ಟಿ ಪ್ರಕಟ:**

ಮನೆ ಗಣತಿ ತರುವಾಯ ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾಗುವುದು. ಮತದಾರ ಪಟ್ಟಿಗೆ ಆಕ್ಷೇಪಣೆಗಳ ಸಲ್ಲಿಕೆಗೆ ಎರಡು ತಿಂಗಳ ಕಾಲಾವಕಾಶ ನೀಡಲಾಗಿದೆ. ಸಾರ್ವಜನಿಕರು ಅಕ್ಟೋಬರ್ 3 ಒಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಸಾರ್ವಜನಿಕರಿಂದ ಬರುವ ಆಕ್ಷೇಪಣೆಗಳ ಇತ್ಯರ್ಥದ ನಂತರ, ಅಕ್ಟೋಬರ್ 7 ರಂದು ಅಂತಿಮ ಮತದಾರರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾಗುವುದು. ನಂತರ ಈಗ ಜಾರಿಯಲ್ಲಿರುವ ಎಲ್ಲಾ ಮತದಾರರ ಪಟ್ಟಿಗಳು ಸಂಪೂರ್ಣವಾಗಿ ರದ್ದಾಗಲಿದ್ದು ಪರಿಷ್ಕೃತ ಮತದಾರರ ಪಟ್ಟಿ ಮಾತ್ರ ಊರ್ಜಿತವಾಗುತ್ತದೆ. ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು.

**ಮತಗಟ್ಟೆಗಳ ಮರುಹಂಚಿಕೆ:**

ಚುನಾವಣೆ ಆಯೋಗದ ನಿಯಮಾವಳಿಗಳ ಪ್ರಕಾರ ಪ್ರದೇಶಗಳಲ್ಲಿ ಗರಿಷ್ಠ 1,200 ಮತದಾರರು ಇರಬೇಕಾಗುತ್ತದೆ. ಸದ್ಯದ ಪರಿಷ್ಕರಣೆಯಲ್ಲಿ ಗರಿಷ್ಠ ಮಿತಿಯನ್ನು 1,200 ಎಂದು ನಿಗದಿಪಡಿಸಿಕೊಳ್ಳಲಾಗಿದೆ. ಯಾವುದೇ ಮತಗಟ್ಟೆ ವ್ಯಾಪ್ತಿಯಲ್ಲಿ 1,200 ಕ್ಕಿಂತ ಹೆಚ್ಚು ಮತದಾರರಿದ್ದರೆ, ಅಂತಹ ಕಡೆಗಳಲ್ಲಿ ಹೆಚ್ಚುವರಿ ಮತಗಟ್ಟೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಒಂದು ಬೂತ್‌ನಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚಿನ ಮತದಾರರು ಇರದಂತೆ ಮರುಹಂಚಿಕೆ ಮತ್ತು ಪರಿಷ್ಕರಣೆ ಮಾಡಿ, ಜುಲೈ 29ರ ಒಳಗಾಗಿ ಈ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಪ್ರತಿಯೊಂದು ರಾಜಕೀಯ ಪಕ್ಷಗಳು ತಮ್ಮ ಮಟ್ಟದಲ್ಲಿ ಬೂತ್ ಮಟ್ಟದ ಏಜೆಂಟರನ್ನು ತಕ್ಷಣವೇ ನೇಮಕ ಮಾಡಿ ಎಸ್.ಐ.ಆರ್ ಪ್ರಕ್ರಿಯೆಗೆ ಸಹರಿಸುವಂತೆ ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ ಆರ್, ಚುನಾವಣಾ ಶಾಖೆಯ ತಹಶಿಲ್ದಾರ ಸಂತೋಷಕುಮಾರ ಹಿರೇಮಠ ಸೇ-ರಿದಂತೆ ಸಹಾಯಕ ಚುನಾವಣಾಧಿಕಾರಿಗಳು ಹಾಜರಿದ್ದರು.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101.
Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101.